

ನತಾ ಸಾಹಿತ್ಯಮಾಲೆ—ಮಣಿ ೩.

ಜೀವನ ಸಂಗೀತ

ಶ್ರೀ ಮಂಜೇಶ್ವರ ಗೋವಿಂದ ಪೈಗಳವರ ಮುನ್ನುಡಿ

ವಿಠಲದಾಸ ಶೆಟ್ಟಿ

೧೯೫೪

ಬೆಲೆ ಒಂದು ರೂಪಾಯಿ.

ಮುದ್ರಕರು:
ಕೆನರಾ ಛಾಪಖಾನೆ, ಮಂಗಳೂರು.

ಪ್ರಕಾಶಕರು:
ಜನತಾ ಸಾಹಿತ್ಯಮಾಲೆ,
ಮಂಗಳೂರು.

ಪುಸ್ತಕದ ಪ್ರತಿ ದೊರೆಯುವ ಸ್ಥಳಗಳು:—

ಜನತಾ ಸಾಹಿತ್ಯಾಲಯ,
ಲಿಮಿಟೆಡ್,
ಮಂಗಳೂರು 1.

ಬಾಲ ಸಾಹಿತ್ಯ ಮಂಡಲ,
ಲಿಮಿಟೆಡ್,
ಮಂಗಳೂರು.

ಪುತ್ತೂರು ತಾಲೂಕು ರೈತ ಸೇವಾ ಸಂಘ,
ವಿಟ್ಲ, ದ. ಕ.

ಮುನ್ನುಡಿ

ಇದೊಂದು ಸುಂದರವಾದ ಕವಿತಾಸಂಗ್ರಹ, ಕವಿಗೆ ಹೆಸರನ್ನು ತರ
ಥಾ ಕವಿತಾಸಂಗ್ರಹ. ಇದರೊಂದಿಗೆ ಕನ್ನಡ ಕಾವ್ಯಸಾಹಿತ್ಯದಲ್ಲಿ
ಡುವ ಈ ಕವಿಯನ್ನು ತ್ರಿಧಾ ಸ್ವಾಗತಿಸುತ್ತೇನೆ.

ಇದರಲ್ಲಿಯ ಕವಿತೆಗಳೆಲ್ಲವೂ ಚಲೋದಾಗಿವೆ. ಅವಲ್ಲಿ ಕೆಲವನ್ನೇ
ವುದಾದರೆ, 'ನಿವೇದನೆ' (ಪು. ೧), 'ಒಳದನಿ' (ಪು. ೫), 'ಸ್ವಾತಂತ್ರ್ಯ
ದೇನು?' (ಪು. ೧೩), 'ರೈತರ ಹಾಡು' (ಪು. ೫೦), 'ಅಳು - ನಗು'
೬೨) ಮೊದಲಾದ ಹಲವು ಕವಿತೆಗಳು ಬಹಳ ಚೆನ್ನಾಗಿವೆ. ಹಾಗೂ
ಬನಿಯ ಹಿಮಸ್ನಾನ' (ಪು. ೩೨), 'ಬಾಳಿಗೆ ಬಣ್ಣವ ಬಳಿಯೋಣ'
೫೪) ಮೊದಲಾದ ರೂಪಕಗಳು ಓದುಗರನ್ನು ತಲೆದೂಗಿಸುವಂಥಾ
ಕಗಳು, 'ಒಳದನಿ'ಯಲ್ಲಿ 'ಹಳ್ಳಿಯ ಮಂದಿಯ ಮರೆತಿರುವಿ!'
೭) ಎಂದು ಕವಿಯನ್ನು ಎಚ್ಚರಿಸಿರುವ ಮಾತು ಇಂದಿನ ಕಬ್ಬಿಗರು
ನಲ್ಲಿ ಕಟ್ಟಿಕೊಳ್ಳತಕ್ಕ ಮಾತು, 'ಸ್ವಾತಂತ್ರ್ಯ ಪಡೆದೇನು?' ಎಂಬ
ಇಂದಿನ ನಾಗರಿಕರು ತಮ್ಮ ಮಸಕು ಕನ್ನಡಕಗಳನ್ನು ಉಜ್ಜುಜ್ಜಿ
ಕಾದ ಕವಿತೆ. ಇಂಥವನ್ನು ಬರೆದ ಕವಿಯನ್ನು ಪುನಃ ಪುನಃ
ದಿಸುತ್ತೇನೆ.

ಇದೊಂದು ಸುಂದರವಾದ ಕವಿತಾಸಂಗ್ರಹ. ಈ ಕವಿಗೆ ದೇವರು
ರ್ಘಾಯುಷ್ಯವನ್ನೂ ದೀರ್ಘಾರೋಗ್ಯವನ್ನೂ ದಯಪಾಲಿಸಿ, ಈಮುಂದೆ
ಮತ್ತೂ ಮೇಲುಮೇಲಾದ ಕವಿತೆಗಳನ್ನೂ ಕಾವ್ಯಗಳನ್ನೂ ರಚಿಸು
ಅನುಗ್ರಹಿಸಲಿ ಎಂದು ಆತನನ್ನು ಪ್ರಾರ್ಥಿಸುತ್ತೇನೆ.

ಇತಿ ಶಮ್

ಗೋವಿಂದ ಪೈ.

Life is grater than all art. I would go even further and declare that the man whose life comes nearest to perfection is the greatest artist; for what is art without the sure foundation and frame work of a noble life?

MAHATMA GANDHI.

(Lenin and Gandhi—by Rene Fulop—Miller.)

ಕಲೆಗಳೆಲ್ಲವುಗಳಿಗಿಂತ ಜೀವನ ಹಿರಿದಾದುದು. ಅದಕ್ಕಿಂತಲೂ ಮುಂದುವರಿದು ನಾನು ಕಂಠೋಕ್ತವಾಗಿ ಹೇಳುವೆ: ಯಾವ ಮಾನವ ಜೀವನವು ಸಂಪೂರ್ಣತೆಯ ಸನಿಹಕ್ಕೆ ಬರುವುದೋ ಅವನೇ ಮಹಾ ಕಲಾವಿದನು. ಯಾಕೆಂದರೆ, ಉದಾತ್ತ ಜೀವನದ ಸ್ಥಿರ ತಳಹದಿ ಮತ್ತು ಚೌಕಟ್ಟಿಲ್ಲದ ಕಲೆಯಿಂದೇನು?

ಮಹಾತ್ಮ ಗಾಂಧಿ.

ಪ್ರಕಾಶಕರ ಎರಡು ಮಾತು.

ನನ್ನ ತರುಣ ಗೆಳೆಯ ಶ್ರೀ। ವಿಠಲದಾಸ ಶೆಟ್ರು ಉಜ್ವಲ ದೇಶಾಭಿಮಾನಿ. ೧೯೪೧ರ ವೈಯಕ್ತಿಕ ಸತ್ಯಾಗ್ರಹದಲ್ಲಿ ಅತ್ಯುತ್ಸಾಹದಿಂದ ಭಾಗವಹಿಸಿ ಉಡುಪಿಗೆ ಬಂದಿದ್ದಾಗ, ಆಗ ಅದಕ್ಕೆ ವಿರೋಧಿಯಾಗಿದ್ದ ನನ್ನೊಡನೆ ತೀವ್ರ ವಾದ ಹೂಡಿದ್ದರು. ಅದು ನಮ್ಮ ಪ್ರಥಮ ಪರಿಚಯ. ಆ ಮೇಲೆ ೧೯೪೨ರಲ್ಲಿ, ಮದ್ರಾಸಿನಲ್ಲಿ ತನ್ನ ವೈದ್ಯಕೀಯ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯಿತ್ತು, 'ಕ್ವಿಟ್ ಇಂಡಿಯಾ' ಮಹಾಂದೋಲನಕ್ಕೆ ದುಮುಕಿ, ಮದ್ರಾಸ್ ನಗರದ ವೀರ ವಿದ್ಯಾರ್ಥಿ ನಾಯಕರೆನಿಸಿ, 'ಬಿ. ಕ್ಲಾಸ್' ಕೈದಿಯಾಗಿ ಬಳ್ಳಾರಿಯ ಆಲಿಪುರಮ್ ಜೈಲಿಗೆ ಸೇರಿ, ಸಿ. ಕ್ಲಾಸಿನಲ್ಲಿ ನರಳುತ್ತಿದ್ದ ನನಗೆ ನೆರವಾಗಿದ್ದರು.

ಸ್ವಾತಂತ್ರ್ಯ ದೊರೆತ ಮೇಲೆ ಶ್ರೀ ಶೆಟ್ರು ಜನತೆಯನ್ನು ಹತ್ತಿಕ್ಕುವ ಬಗೆಬಗೆಯ ಪ್ರತಿಗಾಮಿ ಶಕ್ತಿಗಳನ್ನೆದುರಿಸಿ, ಜನಹಿತ ಸಾಧಿಸಲೆತ್ನಿಸುತ್ತಿದ್ದಾರೆ. ರೈತ ಸಂಘಟನೆಗಾಗಿ ಅನುನಿತ್ಯ ದುಡಿಯುತ್ತಿದ್ದಾರೆ. ಬೇಕಷ್ಟು ಬಿಡುವೂ ತಕ್ಕಷ್ಟು ಅನುಕೂಲತೆಯೂ ಇರುವ ಸುದೈವಿಯಾದುದರಿಂದ, ಚೆನ್ನಾಗಿ ಓದಿ, ವಿಚಾರ ವಿಶ್ಲೇಷಣೆ ಮಾಡಿ, ಸ್ವತಂತ್ರ ಮನೋಭಾವವನ್ನು ವೈಗೂಡಿಸಿಕೊಂಡಿರುತ್ತಾರೆ. ಉತ್ತಮ ಲೇಖಕರು, ಭಾಷಣಕ್ಕಿಂತಲೂ ಮಿಗಿಲಾಗಿ ಸಂಭಾಷಣಾ ಚತುರರು.

ಶ್ರೀ। ವಿಠಲದಾಸ ಶೆಟ್ರ ಕುರಿತು ಇಷ್ಟೆಲ್ಲಾ ಬಲ್ಲ ನನಗೆ, ರಾಜಕೀಯ ತಿರುಗಣಿ ಮಡುವಿನೊಳಗೆ ಸಿಲುಕಿ, ಛಲತೊಟ್ಟು ಹೋರಾಡಿ, ಕಠಿಣ ವಿಮರ್ಶಕತೆಯ ಬಿರುಸು ಬೀರುವ ಅವರಲ್ಲಿ, **ಈ ಜೀವನ ಸಂಗೀತದ** ಕವನಗಳಲ್ಲಿ ಕಾರಂಜಿಯಾಗಿ ರಂಜಿಸುವ ಭಾವ-ರಸ ತರಂಗಿಣಿಯು ಗುಪ್ತಗಾಮಿನಿಯಾಗಿರುವಳೆಂಬ ಕಲ್ಪನೆ ಕೂಡಾ ಇರಲಿಲ್ಲ. ಹಲವು ತಿಂಗಳುಗಳ ಹಿಂದೊಮ್ಮೆ ಅವರು ನನ್ನ ಛಾಪಖಾನೆಗೆ ಬಂದು, ಸುರುಳಿಯಾಗಿ ಮಡಚಿದ್ದ ಒಂದು 'ಎಕ್ಸರ್‌ಸೈಸ್' ಪುಸ್ತಕವನ್ನು ಬಿಡಿಸಿ, "ಇದು ನನ್ನ ಕವನ ಸಂಗ್ರಹ. ಇದನ್ನು ಪ್ರಕಟಿಸುವ ಇಚ್ಛೆ ಇದೆ. ನಿಮಗೆ ಓದಿ ಹೇಳುತ್ತೇನೆ. ಛಾಪಿಸಬಹುದೋ ಎಂದು ನೀವು ಅಭಿಪ್ರಾಯ ಕೊಡಬೇಕು" ಎಂದರು. ಏನೋ

ಸಾಮಾನ್ಯ ಅಣಕು ಪಂಕ್ತಿಗಳಿರಬೇಕೆಂಬ ವಿನೋದಮಯ ಉತ್ಸುಕತೆಯಿಂದ, "ಹುಂ ಓದಿ, ನೋಡುವ" ಎಂದೆ ನಾನು. ಆದರೆ ಅವರು, ರಾಗ-ರಸ-ಭಾವ ಮಾಧುರ್ಯದಿಂದ ಕವನಗಳನ್ನೋದಿ ಹೇಳಿದಾಗ, ಮಿಡಿಯಿತು ನನ್ನ ಹೃದಯ. ತನ್ಮಯನಾಗಿ ಕೇಳಹತ್ತಿದೆ. ಅವು ಮೊಳೆಯುವ ಕುಡಿ ಮೊಗ್ಗುಗಳು ಕೂಡಾ ಅಲ್ಲ; ಪರಿಮಳಿಪ ಅರಳು ಮಲ್ಲಿಗೆಗಳೆಂಬುದನ್ನು ಮನಗಂಡೆ; ಅಗತ್ಯ ಪ್ರಕಟಿಸಬೇಕೆಂದು ಒತ್ತಾಯಿಸಿದೆ.

ಆದರೆ ಮತ್ತೂ ಹಲವು ತಿಂಗಳುಗಳ ವರೆಗೆ ಆಲೋಚಿಸಿ, ಹಲವರ ಅಭಿಪ್ರಾಯ ಕೇಳಿ, ಕಟ್ಟಕಡೆಗೆ 'ಜೀವನ ಸಂಗೀತ'ವನ್ನು ಆದಷ್ಟು ಅಂದ ಚಂದವಾಗಿ, ಕನ್ನಡಿಗರಿಗೊಪ್ಪಿಸಲು ಅವಿರತ ಯತ್ನಮಾಡಿರುವ ಶ್ರೀ। ಶೆಟ್ರು ಅಭಿನಂದನೀಯರು.

ಇತ್ತೀಚೆಗೆತಾನೆ ನಾನು ಹೊರಡಿಸಿರುವ ಜನತಾ ಸಾಹಿತ್ಯಮಾಲೆಯ ಮೂರನೇ ಮಣಿಯಾಗಿ 'ಜೀವನ ಸಂಗೀತ'ವನ್ನು ಪ್ರಕಟಿಸಬೇಕೆಂದು ಶ್ರೀ। ಶೆಟ್ರು ಕೇಳಿಕೊಂಡಾಗ, ನಾನು ಒಡನೆಯೆ ಸಂತೋಷದಿಂದ ಒಪ್ಪಿಕೊಂಡೆ. ಅದಕ್ಕಾಗಿ ಹೃತ್ಪೂರ್ವಕ ಆಭಾರ ಮನ್ನಿಸುವೆ.

ಮಂಗಳೂರು,
೨೧—೧೨—'೫೪.

ಕೆ. ಕೆ. ಶೆಟ್ಟಿ.



ನನ್ನ ಮಾತುಗಳು

ಸಾಹಿತ್ಯ ಕ್ಷೇತ್ರದಲ್ಲಿ ನಾನು ಹೊಸಬ; ಆಳವಾಗಿ ಅಭ್ಯಾಸ ಮಾಡಿದವನಲ್ಲ. ಇದುವರೆಗಿನ ನನ್ನ ಜೀವನದ ಬಹು ಭಾಗವನ್ನು ರಾಜಕೀಯವೇ ಆವರಿಸಿಕೊಂಡಿದೆ. ಅದರಲ್ಲೇ ನನ್ನ ಅನುಭವಗಳು. ಅಲ್ಲಿಯ ಕಹಿ ಸಿಹಿಯಾದ, ಸಾವಿರ ಸತ್ಯಗಳ ದರ್ಶನದಿಂದ ಸ್ಫೂರ್ತಿಗೊಂಡು ಮಿಡುಕಿದ 'ಜೀವನ ಸಂಗೀತ'ವಿದು. ಜೀವನದ ನಾನಾ ಸನ್ನಿವೇಶಗಳಲ್ಲಿ ಎದ್ದ ಭಾವನಾತರಂಗಗಳನ್ನು ಸಂಗ್ರಹಿಸಿ, ಅಂತರಾತ್ಮನು ಹಸಿದಾಗ ಉಣಲಿಟ್ಟ ನೆನಹಿನ ಬುತ್ತಿಯಿದು. ಈ ಬುತ್ತಿಯೂಟವನ್ನು ನನ್ನೊಡನೆ ಆಗಾಗ ಉಂಡು, ಮೆಚ್ಚಿ, ನಾನು ಮತ್ತೂ ಸಂಗ್ರಹಿಸುವಂತೆ ಉತ್ತೇಜನವಿತ್ತವರು ನನ್ನ ಬಾಲಾರಭ್ಯದ ಗೆಳೆಯರಾದ, ಡಾಕ್ಟರ್ ಪಲನೀರು ವೆಂಕಟ್ರಮಣ ಶರ್ಮರು; ಇದುವರೆಗೆ ನಾನು ನನ್ನದಾಗಿ ಬಚ್ಚಿಟ್ಟಿದ್ದ ಬುತ್ತಿಯನ್ನು ಬಿಚ್ಚಿ, ನಾಡ ಜನತೆಯು ಉಣಲೆಂದು ನೀಡಿದವರು ನನ್ನ ಅತ್ಯಂತ ಆತ್ಮೀಯರಾದ ಶ್ರೀ। ಕೆ. ಕೆ. ಶೆಟ್ಟಿಯವರು. ಇವರಿಬ್ಬರಿಗೂ ಈ ಪರ್ವಕಾಲದಲ್ಲಿ ನನ್ನ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ. ಕನ್ನಡಿಗರಿಗೆ ಈ ಬುತ್ತಿಯೂಟವು ರುಚಿಯಾದರೆ ಇನ್ನೂ ಕೊಡಬಲ್ಲೆ.

ನಾಡಿನ ಹಿರಿಯ ಕವಿಗಳಾದ ಶ್ರೀ। ಮಂಜೇಶ್ವರ ಗೋವಿಂದ ಪೈಗಳು, ನನ್ನ ಬುತ್ತಿಯ ಮಣ್ಣ ಗಡಿಗೆಗೆ ಹೊನ್ನ ರೇಖೆಯಂತಹ ಮುನ್ನುಡಿಯನ್ನು ಕರುಣಿಸಿದ್ದಾರೆ. ಈ ವಿಶಾಲ ಸರಳ ಸಹೃದಯದ ರಸಋಷಿಗೆ ನನ್ನ ಅನಂತಾನಂತ ಪ್ರಣಾಮಗಳು.

ಕವಿಗಳಾದ ಶ್ರೀ। ಕಯ್ಯಾರ ಕಿಂಞಣ್ಣ ರೈಗಳು ಮತ್ತು ವಿಠಲ ಹಾಯಿಸ್ಕೂಲಿನ ಕನ್ನಡ ಅಧ್ಯಾಪಕರಾದ ಶ್ರೀ। ಯಂ. ಕೆ. ಗೋವಿಂದ ಶರ್ಮಾ, ವಿದ್ವಾನ್, ಶಿರೋಮಣಿ, ಇವರಿಬ್ಬರೂ ಪುಸ್ತಕದ ಹಸ್ತ ಪ್ರತಿಯನ್ನೋದಿ ಸಲಹೆಗಳನ್ನಿತ್ತು ಸಹಕರಿಸಿರುವುದಕ್ಕಾಗಿ ನಾನು ಸದಾ ಕೃತಜ್ಞನು. ಮುಖಚಿತ್ರವನ್ನು ಚಿತ್ರಿಸಿದ ಕಲಾವಿದ ಶ್ರೀ। ಸೇವುಗುರ್‌ರವರಿಗೂ, ಇದರ ಪಡಿಯಚ್ಚನ್ನು ಒದಗಿಸುವುದರಲ್ಲಿ ನೆರವಾದ ಶ್ರೀ। ಡಿ. ಪುಟ್ಟು ಸ್ವಾಮಿ, ಬಿ. ಎ., ಬಿ. ಯಲ್., ಎಡ್ವಕೇಟ್, ಇವರಿಗೂ ನಾನು ಋಣಿಯಾಗಿದ್ದೇನೆ. ಇಲ್ಲಿರುವ

ಕವನಗಳಲ್ಲಿ ಕೆಲವು ಈ ಮೊದಲೇ ಬೆಳಕು ಕಂಡಿವೆ. ಅಂತಹ ಪತ್ರಿಕೆಗಳ ಸಂಪಾದಕರನ್ನು, ಅವರು ನನಗಿತ್ತ ಪ್ರೋತ್ಸಾಹಕ್ಕಾಗಿ ನಾನೀ ಸಂದರ್ಭದಲ್ಲಿ ಸ್ಮರಿಸದಿರಲಾರೆ.

ಕೊನೆಯದಾಗಿ, ನನ್ನಲ್ಲಿ ಇಷ್ಟಾದರೂ, ಸಾಹಿತ್ಯಾಭಿರುಚಿಯನ್ನು ಉದ್ರೇಕಗೊಳಿಸಿ ನನ್ನೀ ಪ್ರಯತ್ನಕ್ಕೆ ಮಾರ್ಗದರ್ಶಕರಾದ ಹಲವು ಕವಿಗಳಿಗೆ ನಾನಿಂದು ಗುರುಭಕ್ತಿಯಿಂದ ತಲೆಬಾಗುವೆನು.

'ಸೇತುವೆ ನೋಟ'
ವಿಟ್ಲ, ದ. ಕ.
೧—೧—'೫೪.

—ವಿಠಲದಾಸ ಶೆಟ್ಟಿ.

ಕವನ ಸೂಚಿ

ಅರ್ಪಣೆ

ಹಿಂದಿನ ನೆನಸಿನ
ಮುಂದಿನ ಕನಸಿನ
ಮಂದಿರ ಮೂರುತಿ .....

ಅಮ್ಮನಿಗೆ

ವಿಠಲ

ನಿವೇದನೆ

೧

ಎದೆಯುಗಲ ಹೊಲದೊಳಗೆ
ಕಂಬನಿಯ ನೀರೆರೆದು,
ಕನಸುಗಳ ಹೆಗಲಿನಲಿ
ನಿಟ್ಟುಸಿರ ನೊಗವಿಟ್ಟು,
ಕರುಣೆಯಾ ನೇಗಿಲಲಿ
ಉತ್ತು ನೀ ಬಿತ್ತಿರುವ—
ಕವನಗಳ ಬೀಜಗಳು
ಮೊಳಕೆಯೊಡೆದಿವೆ ನೋಡು!
ಎನ್ನಮ್ಮ ಶಾರದೆಯೆ
ಜಗನ್ಮೋಹಿನಿಯೆ ನೋಡು!

೨

ಎನ್ನ ಮಾನಸದೊಳಿಹ
ಮೌನದಾ ಮನೆಯೊಳಗೆ,
ಎನ್ನಂತರಾತ್ಮನನು
ನಿನ್ನ ಕಿರುಗೂಸೆನಿಸಿ,
ವೀಣೆತೊಟ್ಟಿಲೊಳಿಟ್ಟು
ನೀನೊರೆದ ಜೋಗುಳದ
ಮಧುಮಧುರ ಗಾನವನು
ನಾ ಹಾಡುವೆನು ಕೇಳು!
ಎನ್ನಮ್ಮ ಶಾರದೆಯೆ
ಜಗನ್ಮೋಹಿನಿಯೆ ಕೇಳು!

ಕವನ ಸುಂದರಿ

ಎಲ್ಲಿ ತಪವ ಗೈವೆ ನೀನು?
ನಿನ್ನ ಹುಡುಕಿ ದಣಿದೆ ನಾನು,
ಓ ಕವನ ಸುಂದರಿ!
ಹೇ ಕಾವ್ಯ ಮಾಧುರಿ!
ಮೇರು ಗಿರಿಯ ತಪ್ಪಲಲ್ಲಿ,
ಶೈಲ ಶಿಖರ ಗಿರಿಗಳಲ್ಲಿ,
ಶರಧಿಯಂತರಾಳದಲ್ಲಿ,
ನೀಲವರ್ಣ ಗಗನದಲ್ಲಿ,
ಸುತ್ತಿ ಸುತ್ತಿ
ಹುಡುಕಿ ಹುಡುಕಿ
ಕಾಣದಾದೆನು!

ಮಿಂಚುಬಳ್ಳಿ ಮಿನುಗುವಾಗ,
ಸಿಡಿಲ ಮರಿಯು ಕೂಗುವಾಗ,
ಇಂದ್ರ ಚಾಪ ಮೂಡಿದಾಗ,
ಉಷೆಯ ಗೀತೆ ಕೇಳುವಾಗ,
ಬಾಲರವಿಯು ಕಾಣುವಾಗ,
ಕಾಡ ರಸಿಕ ಹಾಡುವಾಗ,
ಪಿಕವು ಸುಖದಿ ನಲಿಯುವಾಗ,
ಮುದ್ದುಗಿಣಿಯು ನುಡಿಯುವಾಗ,
ಜಾಜಿ ಕಮಲ ಬಿರಿಯುವಾಗ,
ನಿನ್ನ ರೂಪ
ನಿನ್ನ ಮಾಯೆ
ನೋಡಲೆಂದು,

ನಿನ್ನ ರಾಗ
ನಿನ್ನ ಗೀತೆ
ಕೇಳಲೆಂದು,
ಕಾದು ಕುಳಿತು ಕಾಣದಾದೆನು!

ನಿನ್ನನೊಳ್ವ ಪಣವ ತೊಟ್ಟು,
ಬಾಳನೆಲ್ಲ ಮೀಸಲಿಟ್ಟು,
ಸೃಷ್ಟಿಯನ್ನೆ ಮರೆತುಬಿಟ್ಟು,
ನಿನ್ನ ಮೂರ್ತಿ ಮನದಲಿಟ್ಟು,
ನಿನ್ನ ಮಂತ್ರ
ನಿನ್ನ ಮಹಿಮೆ
ಹಾಡಲೆಂದು,
ನಿನ್ನ ಜಪವ
ನಿನ್ನ ತಪವ
ಮಾಡಲೆಂದು,
ಹಳ್ಳಿ ಮೂಲೆಯೊಂದ ಸೇರಿ-
ಕಣ್ಣುಮುಚ್ಚಿ ಕುಳಿತೆನು.

* * *
* * *
* * *

ಕಣ್ಣು ಬಿಚ್ಚಿ ನೋಡುವಾಗ,
ಗಾಳಿ ಮಳೆಯು ಬೀಸುವಾಗ,
ಹುಟ್ಟು ಬಡವ ಹೂಡುವಾಗ,
ಹೊಲವನೆಲ್ಲ ಬಿತ್ತುವಾಗ,
ಬೆವರ ಮುತ್ತು ಸುರಿಯುವಾಗ,
ಹಳ್ಳಿ ಹುಡುಗಿ ಹಾಡುವಾಗ,
ಪಚ್ಚೆ ಪೈರು ನಲಿಯುವಾಗ,
ಸ್ವರ್ಣವರ್ಣ ಬೆಳೆಯುವಾಗ,

ನಿನ್ನ ಮುರಲಿ ನಾದವಲ್ಲಿ!
ಜೀವಗೀತೆ ಹಾಡಿತಲ್ಲಿ!
ಬಾಳಬೆಳಕು ಮೂಡಿತಲ್ಲಿ!
ಅಂತರಾತ್ಮನಾಳದಲ್ಲಿ,
ನಿನ್ನ ಗಾನ ರಾಗವಲ್ಲಿ,
ಎಲ್ಲ ಆಗ ಕೇಳಿತಲ್ಲಿ!
ನಿನ್ನ ಚಾಪರೂಪವನ್ನು
ನಿನ್ನ ಛಾಯೆ ಮಾಯೆಯನ್ನು,
ಎಲ್ಲ ಆಗ ಕಂಡೆನಲ್ಲಿ!
ನೀನೆ ಕವಿಯ ವಾಣಿಯು
ನೀನೆ ಕಲೆಯ ರಾಣಿಯು
ನೀನೆ ಕಾವ್ಯ ಮಾಧುರಿ!
ನೀನೆ ಕವನ ಸುಂದರಿ!

ಒಳದನಿ

೧

ಇರುವೆನು ನಾನೀ ಬಯಲಿನ ಮಡಿಲಿನಲಿ;
ಕವಿಗಳು ಬಣ್ಣಿಪ ಹಸುರಿನ ಕಡಲಿನಲಿ!
ಮನೆಮಾಡಿರುವೆನು ಈ ಹಳ್ಳಿಯಲಿ
ಮಣ್ಣಿನ ಮಕ್ಕಳ ಮಧ್ಯದಲಿ!
    ಅನ್ನವ ನೀಡುವ ನೆಲವಿಹುದು,
    ಹೊನ್ನಿನ ವರ್ಣದ ಪೈರಿಹುದು,
    ಬಣ್ಣದ ಬಾನಿನ ಚೆಲುವಿಹುದು,
    ಚಿನ್ನದ ಸೂರ್ಯನ ಸೊಗಸಿಹುದು!
ಹಣ್ಣಿನ ಹಂಪಲು ಕಾಡಿಲ್ಲಿ,
ಕೋಗಿಲೆ ಗಿಳಿಗಳ ಬೀಡಿಲ್ಲಿ,
ಹಾಡುತ ದುಡಿಯುವ ಹೆಣ್ಣಿಲ್ಲಿ,
ನಲಿಯುತ ಹರಿಯುವ ತೋಡಿಲ್ಲಿ!

೨

ಹಾಡುವ ಕವಿಯೇ ಕಣ್‌ಬಿಚ್ಚು;
'ಕಲ್ಪನೆ ಕನಸದು' ಬರಿಹುಚ್ಚು!
ಬಡತನ ಬ್ರಹ್ಮದ ಕಾಡ್ಗಿಚ್ಚು,
ಹುಡುಕುತ ಬರುತಿದೆ ಬಾಯ್‌ಮುಚ್ಚು!
    ಹಳ್ಳಿಯ ಹಸುರದು ಬಾಡುತಿದೆ,
    ಬಾಳಿನ ನೇಸರು ಮುಳುಗುತಿದೆ,
    ಹಸಿವಿನ ಸಿಡಿಲದೊ ಕೇಳುತಿದೆ!
    ಬೆವರಿನ ತೊರೆಯದೊ ಉಕ್ಕುತಿದೆ!

ರಕ್ತದ ಮೋಡವು ತೇಲುತಿದೆ!
ಕ್ರಾಂತಿಯ ಮಿಂಚದೊ ಹಾರುತಿದೆ!
ಮಾನವ ಪ್ರೇತವು ಕಿರುಚುತಿದೆ!
ಶಾಂತಿಯ ಶಕ್ತಿಯು ಕುಂದುತಿದೆ!

೩

ಸತ್ಯದ ಹಾದಿಯು ಮಾಸುತಿದೆ,
ಮಿಥ್ಯದ ದವಡೆಯು ಮೆಲುಕುತಿದೆ!
ಜೀವನ ಸಾಗರ ಬತ್ತುತಿದೆ,
ಕಾಳನ ಚಕ್ರವು ಸುತ್ತುತಿದೆ.
ಹಾಡುವ ಕವಿಯೇ ನೀನೋಡು,
ಸುಂದರ ವನಗಳ ಈನಾಡು!
ದುಡಿತದ ಬಡವಗೆ ಇದುಕಾಡು,
ನಿನ್ನಯ ಕನಸಿನ ಈಬೀಡು
ಸತ್ಯದ ಹೆಸರಲಿ ಧರ್ಮದ ಹೆಸರಲಿ
ಅತ್ಯಾಚಾರವ ನಡೆಸುವರಿಲ್ಲಿ,
ಕತ್ತನು ಹಿಸುಕುವ ಕಪಟಿಗಳಿಲ್ಲಿ
ದಲಿತರ ನೆತ್ತರು ಕುಡಿಯುವರಿಲ್ಲಿ.

೪

ಗಿರಿವನಗಳ ಕೆರೆತೊರೆಗಳ ನೋಡಿ,
ಹಕ್ಕಿಯ ತೆರದಲಿ ದಿನದಿನಹಾಡಿ,
ಅನುದಿನ ಮನಸಿಗೆ ಶಾಂತಿಯ ಮಾಡಿ
ನಲಿದಾಡುವ ಕಬ್ಬಿಗ ನೀನೋಡು!
ಹಸುರಿನ ಹೊನ್ನಿನ ಹೊಲದಲ್ಲಿ,
ಹಳ್ಳಿಯ ಬಾಳನು ನೋಡಿಲ್ಲಿ,
ಕರುಳಿನ ವೀಣೆಯ ಸ್ವರವಿಲ್ಲಿ,
ಹೃದಯದ ಜಾಗಟೆ ಕೇಳಿಲ್ಲಿ!

ಎಲುಬಿನ ಯಂತ್ರವು ನಡೆಯುತಿದೆ,
ಮಾನವ ಕೋಟಿಯು ದುಡಿಯುತಿದೆ,
ಹಸಿವಿನ ಜ್ವಾಲೆಯು ಉರಿಯುತಿದೆ!
ಪ್ರಾಣದ ಸೊಡರದೊ ಆರುತಿದೆ!

೫

ತೆಂಗಿನ ಕಂಗಿನ ತೋಟಗಳ,
ಬೆಟ್ಟದ ಮಲೆಗಳ ನೋಟಗಳ,
ಪಚ್ಚೆಯ ಪೈರಿನ ಬಯಲುಗಳ,
ಕಿನ್ನರ ಖಗಗಳ ಕೂಟಗಳ,
    ಕವಿನೀವರ್ಣಿಸಿ ಬಣ್ಣಿಸಿ ಬರೆದಿರುವಿ!
    ಹಾಡುತ ಹಾಡಿಸಿ ಮೆರೆದಿರುವಿ
    ವಿಶ್ವವನೆಲ್ಲಾ ಒಲಿಸಿರುವಿ,
    ಹಳ್ಳಿಯ ಮಂದಿಯ ಮರೆತಿರುವಿ!
ಸಾವಿರ ಸತ್ಯದ ದೃಶ್ಯವನೋಡು;
ಸಾವಿನ ರೌದ್ರವ ನೃತ್ಯವನೋಡು;
ತನುಮನವೆಲ್ಲಾ ಸೇವೆಗೆ ನೀಡು;
ದಲಿತರ ಪಾಡಿನ ಹಾಡನುಹಾಡು!

ಸ್ವಪ್ನಗಾನ*

೧

ತೊಟ್ಟಿಲ ದೂಡುತ,
ಜೋಗುಳ ಹಾಡುತ,
ಕಿನ್ನರ ಲೋಕದ
ನಾಕದ ಸವಿಯನು
ಉಣ್ಣಿಸಿ, ಮಲಗಿಸಿ,
ಮುತ್ತನು ಕೊಟ್ಟಿಹ!
ಹಿಂದಿನ ನೆನಸಿನ,
ಮುಂದಿನ ಕನಸಿನ,
ಮಂದಿರ ಮೂರುತಿ!
ಮಾತೆಯೆ ನೀನು!

೨

ನಿನ್ನಯ ಒಡಲಿನ,
ಪ್ರೇಮದ ಕಡಲಿನ
ಮಡಿಲಿಂದೆನ್ನನು,
ಕನ್ನಡನಾಡಿಗೆ
ಕಾಣಿಕೆ ಇತ್ತು
ಮರಳಿದೆ ನೀನು!
ಎನ್ನನು ಹರಸಿ,
ತನ್ನನು ಮರಸಿ,
ಮಣ್ಣಿನ ಮಾಯೆಯ
ದೇಗುಲದೊಳಗೆ!

---

* ಅಗಲಿದ ಅಮ್ಮನಿಗೆ ಆಹ್ವಾನ—ಸ್ವರ್ಗವಾಸಿಯಾದ ತಾಯಿಯ ನೆನಪಿಗಾಗಿ ಈ ಕವನವನ್ನು ಬರೆಯಲಾಗಿದೆ.

೩

ನಿನ್ನ ಮೋಹ ಪ್ರೀತಿಯನ್ನು,
ನಿನ್ನ ಸ್ನೇಹ ನೀತಿಯನ್ನು,
ಎನ್ನ ಹೃದಯ
ದೊಳಗೆ ತುಂಬಿ,
ರಕ್ತದೊಡನೆ
ಬೆರಸಿ ಕಲಸಿ,
ನಡೆದೆನೀನು, ಮಡಿದೆನೀನು,
ಕಡೆಗೆಸೇರಿ ಮೌನಶಾಂತಿ
ಶಕ್ತಿಯೊಡನೆ ನಿತ್ಯದೊಡನೆ,
ಮುಕ್ತಿಹೊಂದಿದೆ!

೪

ಮುಕ್ತಿ ಎಂಬ ತಾಯಿ, ತನ್ನ
ಯುಕ್ತಿ ಸೆರೆಯೊಳಿಟ್ಟು ನಿನ್ನ,
ಮರಳಿ ಬರುವ
ಆಶೆಯನ್ನ
ಮುರಿದು
ಬಿಟ್ಟಳೆ?
ಮರುಗುತಿಹೆನು ನಾನು ಇಲ್ಲಿ,
ಇರುಳು ಹಗಲು ಕಾಯ್ವೆನಿಲ್ಲಿ,
ಮರುಳು ಹಿಡಿವುದೆನಗೆ ತಾಯೆ,
ಬಾರಲಾರೆಯ?

೫

ಹಾಡುತಿರುವ ಹಕ್ಕಿಯನ್ನು,
ಓಡುತಿರುವ ಹರಿಣಿಯನ್ನು,

ತಡೆದು ಹೇಳಿ
'ನಿನ್ನ ಹುಡುಕಿ
ನೋಡಿರೆಂದು'
ಬೇಡಿನಿಂದು,
ಅಲೆಯುತಿರುವ ತುಂಬಿಯೊಡನೆ,
ಅರಳುತಿರುವ ಹೂವಿನೊಡನೆ,
ಸುಳಿಯುತಿರುವ ಅನಿಲನೊಡನೆ,
ನಿನ್ನ ಕೇಳಿ ನೋಡಿದೆ!

೬

ತಿರೆಯುವುರೆಯ ಕಳಚಿ ಒಮ್ಮೆ,
ತಿರುಗಿ ಬರುವಿಯಾದರಮ್ಮ!
ನಿನ್ನ ನೋವು
ದುಃಖಗಳನು,
ಹೃದಯವೀಣೆ
ಯಲ್ಲಿ ಬೆರಸಿ,
ಎನ್ನ ಮಧುರ ಗೀತೆಯಿಂದ,
ನಿನ್ನ ಮನವನೊಲಿಸಿ ನಲಿಸಿ,
ಇನ್ನು ಬಾಳ ಹರಿಸಗೊಳಿಸಿ
ನಿನ್ನನುಳಿಸಿ ಮೆರೆಯುವೆ!

೭

ಹೆತ್ತುಹೊತ್ತು ಸಲಹಿದಾತೆ,
ಮತ್ತೆ ಮೊಲೆಯನುಣಿಸಿದಾತೆ,
ಕಂದನಳುವ
ಕೇಳಿನೀನು,
ಇಂದು ಬರುವಿಯು?
ಬಾರದಿರಲು—

ನಿನ್ನದೊಂದು ಗೋರಿಕಟ್ಟಿ
ಎನ್ನ ಹೃದಯಪುಷ್ಪದಿಂದ
ನಿನ್ನಪೂಜೆ ಗೈದುಬಲಿಸಿ
ಮತ್ತೆ ಕರೆಯಲೆ?

೮

ಚಂದ್ರನನ್ನು ಹಿಡಿದುತಂದು,
ಕಲ್ಲಿನಂತೆ ಕೆತ್ತಿ, ಕಡಿದು,
ಗೋಡೆಯನ್ನು
ಕಟ್ಟಿಮುಗಿಸಿ,
ನಿನ್ನಗೋರಿ
ಮಾಡಲೆಂದು,
ಇಂದ್ರನನ್ನು ಬೇಡೆ ನಾನು,
ಇಂದ್ರಧನುವು ದೊರಕದೇನು?
ಮಾಡುಮಾಡಿ, ಮುಗಿಲಹಂಚು
ಮುಚ್ಚಿನೋಡುವೆ!

೯

ಸೂರ್ಯನನ್ನು ಎಳೆದುತಂದು,
ತಾರೆಗಳನು ಸೂರೆಗೈದು,
ನಿನ್ನಗೋರಿ
ಸುತ್ತುಮುತ್ತು
ದೀಪಮಾಲೆ
ಬೆಳಗುವೆ!
ಸಿಡಿಲು ಮಿಂಚುಗಳನು ಎಲ್ಲ,
ಹಿಡಿದುತಂದು ಸೇನೆಕಟ್ಟಿ,
ಕಡೆಗೆನಿನ್ನ ಗೋರಿಕಾಯೆ
ವಿಧಿಗೆ ವಿಧಿಸಿಬಿಡುವೆನು.

೧೦

ಮತ್ತೆ ನಿನ್ನ ಗೋರಿಮುಂದೆ
ಎನ್ನ ಕರುಳ ವೀಣೆಹಿಡಿದು
　　ಕೂಗಿಕರೆವೆ
　　ಮೃತ್ಯುದೇವಿ
　　ಮನವುಮರುಗಿ
　　ಹೃದಯಕರಗಿ
ಮತ್ತೆ ಕೊಡುವಳವಳು ಎನಗೆ
ಕಿತ್ತು ಬುವಿಯ ದವಡೆಯಿಂದ
ಸತ್ತುಹೋದ ನಿನ್ನ ನಾನು
　　ಮರಳಿ ಪಡೆವೆನು.

ಸ್ವಾತಂತ್ರ್ಯ ಪಡೆದೇನು?

ಸ್ವಾತಂತ್ರ್ಯ ಪಡೆದೇನು,
ಪರತಂತ್ರ ಮುರಿದೇನು,
ಇಂದೇನು? ಇಂದೇನು?
ನಿನ್ನೆಯ ಹಿಂದೇನು?
ಇಂದೇನು? ಇಂದು?

ಜನಮತವು ಕೇಳುತಿದೆ,
ಸ್ವಾತಂತ್ರ್ಯ ಪಡೆದೇನು,
ಪರತಂತ್ರ ಮುರಿದೇನು,
ಇಂದೇನು? ಇಂದೇನು?
ನಿನ್ನೆಯ ಹಿಂದೇನು?
ಇಂದೇನು ಎಂದು?

ಮನೆಮನೆಯು ಮರುಗುತ್ತ,
ಮನಮನವು ಸೊರಗುತ್ತ,
ಜನಜನವು ಕಂಬನಿಯ,
ಸುರಿಸುತ್ತ ಕೇಳುತಿದೆ—

ಸ್ವಾತಂತ್ರ ಪಡೆದೇನು,
ಪರತಂತ್ರ ಮುರಿದೇನು,
ಇಂದೇನು? ಇಂದೇನು?
ನಿನ್ನೆಯ ಹಿಂದೇನು?
ಇಂದೇನು? ಎಂದು?

ತರತರದ ಗಿರಣಿಗಳು,
ದುಡಿದುಡಿವ ಮಂದಿಗಳು
ಸಿರಿಹೊನ್ನ ಗಂಟುಂಟು—
ಯಾರೊಳುಂಟು?

ನೆಲ ಉಂಟು, ಹೊಲ ಉಂಟು,
ಬಗೆಬಗೆಯ ಪೈರುಂಟು,
ತಿಂದು ತೇಗುವರುಂಟು,
ಬೆಳೆಸುವರಿಗೇನುಂಟು?
ಹಳೆದಿನದ ದಾರಿದ್ರ್ಯ
ಬಿಟ್ಟಿಹುದೆ ನಂಟು?

ಒಡಲುರಿಯು ನಂದಿಲ್ಲ,
ಬೆವರ ಮಳೆ ನಿಂದಿಲ್ಲ,
ಬಾಳುವೆಯು ಬಸಿರೊಡನೆ
ಬವರವನು ಸಾರುತ್ತ
ಕೇಳುತಿದೆ; ಮುಂದೇನು?

ಸ್ವಾತಂತ್ರ್ಯ ಪಡೆದೇನು,
ಪರತಂತ್ರ ಮುರಿದೇನು,
ಇಂದೇನು? ಇಂದೇನು?
ನಿನ್ನೆಯ ಹಿಂದೇನು
—ಇಂದೇನು ಎಂದು?

ಎದೆಯಗಲ ಬಾನಿನಲಿ
ಹಳೆದಿನದ ಕನಸುಗಳು
ಸಿಡಿದೊಡೆದು ಗುಡುಗುತಿವೆ;
ಹೃತ್ಕಮಲ ಮುಗಿಲಾಗಿ,

ರಕ್ತಮಳೆ ಸುರಿಯುತಿದೆ!
ಮನವೆಂಬ ಚುಕ್ಕಿಯದು,
ಮಾಸುತ್ತ ಕೇಳುತಿದೆ—
ಆಶೆಯಾ ಬಾನಕ್ಕಿ
ಹಾರುತ್ತ ಹಾಡುತಿದೆ—

ಸ್ವಾತಂತ್ರ್ಯ ಪಡೆದೇನು,
ಪರತಂತ್ರ ಮುರಿದೇನು,
ಇಂದೇನು? ಇಂದೇನು?
—ಇಂದೇನು ಎಂದು?

ಗಾಂಧೀಜಿಗೆ

೧

ಭಾರತೀಯ ಬಾಳ್ವೆಗಾಗಿ,
ಸಾಯುತಿರುವ ಶಾಂತಿಗಾಗಿ,
ತಾಯಿಯಂತೆ ಬಾಳಿ ಬದುಕಿ,
ಹಿಂಸೆಯನ್ನು ಅಳಿಸಲೆಂದು,
ಲೋಕವನ್ನು ಉಳಿಸಲೆಂದು,
ಪ್ರಾಣವನ್ನೆ ಧಾರೆ ಎರೆದು,
ಧನ್ಯನಾದೆಯಾ!
ಜಗದಿ ಮಾನ್ಯನಾದೆಯಾ!

೨

ದೀನ ಜನರ ಬಂಧುವಾಗಿ,
ಭರತಸುತರ ತಂದೆಯಾಗಿ,
ಜಗವನುಳಿಸಿದಾತ, ತಾತ!
ಇಳೆಯು ನಿನ್ನ ಮರೆಯಲುಂಟೆ?
ಸತ್ಯ ಪ್ರೇಮ ದಯೆಯ ಗಂಟೆ?
ಕಲಿಯುಗದಾ ಕರ್ಮಯೋಗಿ
ನಿನ್ನ ನೀತಿ ಬೆಳೆಯಲಿ!
ವಿಶ್ವವನ್ನೆ ಬೆಳಗಲಿ!

ಜೀವನ ಸಂಗೀತ

ಹಾಡಮ್ಮ ಹಾಡು!
ಕಾಡೀನ ಒಳಗಿಲ್ಲಿ,
ಬಾ ಇಲ್ಲಿ ಹಾಡು ॥ ಪಲ್ಲ ॥

೧

ಬಿಸಿಲೀನ ಬಿಸಿಯನ್ನು,
ಹಸುರೀನ ಹಸಿವನ್ನು,
ಕಾಡಿನ ತಂಪಿಲ್ಲಿ, ಕಾಡಿನ ಸೊಂಪಲ್ಲಿ,
ಹುಸಿಯಾಗಿ ಮಾಡಲು,
ಹಸನಾಗಿ ಬಂದೆ,
ಹಾಡಮ್ಮ ಹಾಡು......

೨

ನವಿಲಿನ ನಲಿತವ,
ಜಿಂಕೆಯ ಕುಣಿತವ,
ಕೋಗಿಲೆ ಕೂಗುವ, ರಾಗದ ರಂಗವ
ನೋಡಲು ಬಂದೆ,
ಹಾಡಮ್ಮ ಹಾಡು......

೩

ಹೂವೀನ ಸೊಗಸನ್ನು,
ತಳಿರಿನ ಬೊಗಸನ್ನು,
ಕಾಯಿಯ ಹಣ್ಣಿನ,
ಜೇನಿನ ಸವಿಯನ್ನು ಹೀರುವ ಸಾಹಸ
ಮಾಡಲು ಬಂದೆ!
ಹಾಡಮ್ಮ ಹಾಡು......

೪

ಮುಳ್ಳಮ್ಮ ಮುಳ್ಳು,
ಕಾಲಿಗೆ ಚುಚ್ಚುವುದು,
ಮೈಯೆಲ್ಲ ಮುಚ್ಚಿಹುದು,
ಸುಳ್ಳಮ್ಮ ಸುಳ್ಳು!
ಸುಂದರ ವನವೆಲ್ಲ ಸುಳ್ಳು!
ಹಾಡಮ್ಮ ಹಾಡು......

೫

ಕಲ್ಲಮ್ಮ ಕಲ್ಲು,
ನಡೆದತ್ತ ಕಲ್ಲು!
ಎಲ್ಲೆಲ್ಲು ಕಲ್ಲು,
ಹಸುರಿನ ಬನದೆದೆ ಕಲ್ಲು!
ಹಾಡಮ್ಮ ಹಾಡು......

೬

ಇಲ್ಲಮ್ಮ ಇಲ್ಲಿ,
ಖಗಗಳ ಸೊಲ್ಲು,
ಎಲ್ಲೆಲ್ಲು ನೋಡದೊ—
ಮಿಗಗಳ ಗುಲ್ಲು,
ಹಾಡಮ್ಮ ಹಾಡು......

೭

ಹಾಡುವ ಕೋಗಿಲೆ,
ಕಾಡನ್ನು ಬಿಟ್ಟಿಹುದು;
ಬೇಡರ ಬಲೆಗಳು
ಕಾಡನ್ನು ಮುಚ್ಚಿಹುದು;
ನೋಡಮ್ಮ ನೋಡು!
ಹಾಡಮ್ಮ ಹಾಡು......

೮

ಹೂವಲ್ಲಿ ನೋಡು,
ಹುತ್ತದ ಎಡೆಯಲ್ಲಿ,
ಹಾವಮ್ಮ ಹಾವು,
ಅಲ್ಲಿಹುದು ಸಾವು;
ಹೂವೆಲ್ಲ ಹಾವು!
ಹಾಡಮ್ಮ ಹಾಡು......

೯

ಮಾವಿನ ಹಣ್ಣದೊ,
ತಿಂದೊಮ್ಮೆ ನೋಡು,
ಬೇವಮ್ಮ ಬೇವು,
ಹಣ್ಣೆಲ್ಲ ಮರವೆಲ್ಲ
ಬೇವಮ್ಮ ಬೇವು-
ಹಾಡಮ್ಮ ಹಾಡು......

೧೦

ಸಾಕಮ್ಮ ಸಾಕು,
ಕಾಡೀನ ಶೋಕ,
ಮನಸೆಲ್ಲ ಮುಸಿಯಾಯ್ತು,
ಕನಸೆಲ್ಲ ಹುಸಿಯಾಯ್ತು,
ಹಾಡಮ್ಮ ಹಾಡು......

೧೧

ಹಾಡಮ್ಮ ಹಾಡು,
ಬೃಂದೆಯ ಕಂದಗೆ,
ಪಿಲ್ಲಂಗೋವಿಯು
ಹಾಡಲು ಕಲಿಸಿದ,
ನೀನೊಮ್ಮೆ ಹಾಡು!
ಹಾಡಮ್ಮ ಹಾಡು......

೧೨

ವನವಾಸಿ ರಾಮನು,
ಬನದಲ್ಲಿ ಅಲೆವಾಗ,
ಮನಸಿಗೆ ನೆಮ್ಮದಿ,
ನೀಡಿದ ಹಾಡನ್ನು
ನೀನೊಮ್ಮೆ ಹಾಡು,
ಹಾಡಮ್ಮ ಹಾಡು......

೧೩

ಹಾಡಮ್ಮ ಹಾಡು,
ಬುದ್ಧನ ಬುದ್ಧಿಯು
ತಿದ್ದದ ಹಾಡನ್ನು
ಮಗುಳೊಮ್ಮೆ ಹಾಡು,
ಹಾಡಮ್ಮ ಹಾಡು......

೧೪

ಋಷಿಗಳ, ಕವಿಗಳ,
ಕಿವಿಯಲ್ಲಿ ಹಾಡಿದ
ಹಾಡನ್ನು ಹಾಡೊಮ್ಮೆ
ಕಾಡೀನ ಕಹಿಯನ್ನು
ದೂಡೊಮ್ಮೆ ದೇವಿ!
ಹಾಡಮ್ಮ ಹಾಡು......

೧೫

ಬಾಳಿನ ಕಾಡಿಲ್ಲಿ,
ಬಾ-ಇಲ್ಲಿ ಹಾಡು!
ಹಾಡಿನ ಕಡಲೇರಿ,
ಶಾಂತಿಯ ಅಲೆ ಬಂದು,
ತುಂಬಲಿ ಕಾಡನ್ನು
ಹಾಡಮ್ಮ ಹಾಡು......

ಮನಃಪತಂಗ

೧

ಎನ್ನಂತರಂಗ,
ಮನಃಪತಂಗ!
        ಹಾರುತಿರುವುದು;
ಉದ್ವೇಗದಿಂದ,
ಉದ್ಬೋಧದಿಂದ
        ಸಾಗುತಿರುವುದು.

೨

ಗಗನದಿಂದ,
ಚೆಲುವುಚಂದ,
        ಹರಿಯುತಿರುವುದು;
ಮಲೆಗಳಲ್ಲಿ,
ಮುಗಿಲಬೆಳ್ಳಿ,
        ಬೆಳೆಯುತಿರುವುದು.

೩

ತೆಂಗುಕಂಗು,
ಬಾನರಂಗು,
        ಕರೆಯುತಿರುವುದು;
ಹೊಲದಮಾಲೆ—
ಬಯಲಮೇಲೆ,
        ಹಾರುತಿರುವುದು.

೪

ತೆನೆಯ ನಾಡ,
ಹಸುರ ಬೀಡ,
　　ಕೊಡುತಿರುವುದು;
ಬಾಳೆಗೊನೆಯ,
ಗಿಳಿಯ ಮನೆಯ,
　　ಸೇರುತಿರುವುದು.

೫

ಹುಲ್ಲು ಬಳ್ಳಿ,
ಬೆಳೆದ ಹಳ್ಳಿ,
　　ಕೆರೆಯು ಯಿರುವುದು;
ಬದಿಯೊಳಲ್ಲಿ,
*ಕುಂಡಕೋಳಿ,
　　ಕುಣಿಯುತಿರುವುದು.

೬

ತೆಂಗು ಬಂದು,
ಬಾಗಿ ನಿಂದು,
　　ಇಣುಕುತಿರುವುದು;
ಕೆರೆಗೆ ಯೆಂದು,
ಇಳಿವೆನೆಂದು,
　　ಕಾಯುತಿರುವುದು.

೭

ಶಶಿಯ ಹೆಣ್ಣು,
ಕಮಲೆ ಕಣ್ಣು,
　　ಮುಚ್ಚಿಯಿರುವುದು;

---

* ಕೊಕ್ಕರೆ ವರ್ಗಕ್ಕೆ ಸೇರಿದ ಕಪ್ಪು ವರ್ಣದ ಸುಂದರವಾದ ಪಕ್ಷಿ.

ಹಸುರುಪಾಚಿ,
ಪ್ರಣಯವಾಚಿ,
        ಬಳಿಯೊಳಿರುವುದು.

೮

ಚೆಲುವಮರಿಯು,
ಕೇದಗೆಯು
        ಗುಟ್ಟನರಿವುದು;
ಮುಳ್ಳುಬಲ್ಲೆ*
—ಯಲ್ಲಿ ಅಲ್ಲೆ,
        ಅಡಗಿಯಿರುವುದು.

೯

ಇದನುನೋಡಿ,
ಹಾಡಿಹಾಡಿ,
        ಹಾರುತಿರುವುದು;
ಎನ್ನಂತರಂಗ,
ಮನಃಪತಂಗ!
        ಸಾಗುತಿರುವುದು.

೧೦

ಹಸುರಿನಲ್ಲಿ,
ಬಯಲಿನಲ್ಲಿ,
        ತಣಿಯುತಿರುವುದು;
ಚೆಲುವನೆಲ್ಲ,
ಸೊಬಗನೆಲ್ಲ,
        ಸವಿಯುತಿರುವುದು.

---

* ಪೊದರು.

೧೧

ಹಳ್ಳಿನೋಟ,
ವಿಧಿಯಮಾಟ,
        ನೋಡುತಿರುವುದು;
ಹರುಷದಿಂದ,
ಸರಸಬಂದೆ,
        ಹಾಡುತಿರುವುದು.

ಮಳೆಗಾಲ—ಬರಗಾಲ

೧

ಬಂದಿದೆ ಮಳೆಗಾಲ,
ಹಸಿವಿನ ಬೆಳೆಗಾಲ,
ನಾಡಿಗೆ ನೆರೆಗಾಲ,
ಅಳಿಗಾಲ!

೨

ಬಂದಿದೆ ಕರಿಗಾಲ,
ಹಳ್ಳಿಗೆ ಕೊನೆಗಾಲ,
ಹೆಸರಿಗೆ ಮಳೆಗಾಲ,
ಬರಗಾಲ!

೩

ಹೊಲವೆಲ್ಲ ತುಂಬಿದೆ,
ಬೆಳೆಯೆಲ್ಲ ಕೊಳೆತಿದೆ,
ಮಳೆಗಾಲ ತಂದಿದೆ,
ಬರಗಾಲ!

೪

ಮಗುವಿಗೆ ಹಾಲಿಲ್ಲ,
ಮನೆಯವಳ ಹಾಡಿಲ್ಲ,
ಕಾದಿದೆ ಮುಂದೆಲ್ಲ,
ಕಲಿಗಾಲ!

೫

ಕೈಯಲ್ಲಿ ಹಣವಿಲ್ಲ,
ಮನೆಯಲ್ಲಿ ಕೂಳಿಲ್ಲ,
ಮನಸೆಲ್ಲ ಬಾಳೆಲ್ಲ,
ಕಂಗಾಲ!

೬

ಉಡಲಿಲ್ಲ ಉಣಲಿಲ್ಲ,
ಹಳ್ಳಿಯ ಜನಕಿಲ್ಲ,
ಮನೆಯಿಲ್ಲ, ಮುಂದಿಲ್ಲ
ಉಳಿಗಾಲ!

೭

ಅಲ್ಲಲ್ಲಿ ಗೋಳು!
ಊರೆಲ್ಲ ಹಾಳು!
ಇನ್ನಿಲ್ಲ ಬಾಳು!
ಕಡೆಗಾಲ!

ಕರುಳಕರೆ

ಹಸುರುಹಳ್ಳಿ ನೋಡಿಓಡಿ
ಸ್ವಪ್ನದಲ್ಲಿ ಹಾಡುತಿರುವ
ಕವಿಯೆ ಬಾರೆಲ! ೧

ಕನಸಬಿಟ್ಟು, ಮನಸನಿಟ್ಟು,
ಹಳ್ಳಿಗುಟ್ಟು ಅರಿಯಲೆಂದು,
ಓಡಿಬಾರೆಲ! ೨

ಹಿರಿಯಕವಿಯೆ ಕಿರಿಯಕವಿಯೆ,
ನಿತ್ಯಹಾಡುತಿರುವ ಕವಿಯೆ!
ನೋಡು ಬಾರೆಲ! ೩

ನಿನ್ನಬಸಿರಿ ನುಸಿರನುಳಿಸಿ,
ತನ್ನಬಾಳ್ವೆ ಸವೆಸುತಿರುವ
ತ್ಯಾಗನೋಡೆಲ! ೪

ಬಿಸಿಲಿನಲ್ಲಿ ಬೇಯುತಿರುವ,
ಹಸಿವಿನಲ್ಲಿ ನೋಯುತಿರುವ,
ತಪವ ನೋಡೆಲ! ೫

ಭೂಮಿಯನ್ನು ಉತ್ತುಬಿತ್ತಿ,
ನಿನ್ನಬಾಳನೆತ್ತಿ ಹಿಡಿದ—
ಖುಷಿಯ ನೋಡೆಲ!

ಹಸುರ ಚೆಲುವಿನಾಳದಲ್ಲಿ,
ಹಸಿವುಬೇನೆ ನೋಡಿಯಿಲ್ಲಿ,
ಕವನಕಟ್ಟೆಲ! ೭

ದುಡಿತದಿಂದ ಬಳಲಿಬಂದ
ರೈತರೆದೆಯ ಹಾಡನಿಂದು
ಬರೆಯೊ ಬಾರೆಲ! ೮

ಹರುಷೆ ಬಂಜೆಯಾಗುತಿರುವ,
ಗಬ್ಬಿಶೋಕೆ ಹಡೆಯುತಿರುವ,
ಸತ್ಯ ನೋಡೆಲ! ೯

ರಕ್ತವೆಲ್ಲ ಆರುತಿರುವ,
ಶಕ್ತಿಯೆಲ್ಲ ಸಾಯುತಿರುವ,
ದುಡಿತ ನೋಡೆಲ! ೧೦

ಮೃತ್ಯು ನೃತ್ಯವಾಡುತಿರುವ,
ನಿತ್ಯ ರುದ್ರರಂಗವಿಲ್ಲಿ,
ನೋಡು ಬಾರೆಲ! ೧೧

ನಗುವ ಮೊಗವ ಕಾಣಲಾರೆ,
ಕರುಳಬೇನೆ ಸಹಿಸಲಾರೆ,
ಕವಿಯೆ ಬಾರೆಲ! ೧೨

ಹಳ್ಳಿಯನ್ನು ಸುತ್ತಿಸುತ್ತಿ,
ಮಸಣಬೀಣೆ ಬಾರಿಸುತ್ತ,
ಹಾಡು ಬಾರೆಲ! ೧೩

ಕ್ರಾಂತಿಕಹಳೆ

೧

ಎತ್ತನೋಡಿದರತ್ತ ಕತ್ತಲು!
ಸುತ್ತುಮುತ್ತಲು ಜಗವೆಲ್ಲ—
ಕಗ್ಗತ್ತಲ ಖಣಿಯಾಗಿ ಕಾಣುತಿದೆ!
ಹೇಮನವೆ! ನೀನೇಕೆ ಮರುಗುತಿಹೆ?
ಅತ್ತದೋ-ಕವಿದಿರುವ ಕರಿಮೋಡಗಳ
ಮಧ್ಯದಿಂ ಕಾಣುತಿಹ
ಕಾಳರಕ್ಕಸನ ರಕ್ತರಾಜ್ಯದಂಚನು
ಸಾಗು! ನಡೆ ಮುಂದೆ ಮುಂದೆ!

೨

ಅಜ್ಞಾನವೇಕೆ ಮನ? ನಿನಗೆ ಸಂಶಯವೇಕೆ?
ರಕ್ತರಾಜ್ಯದಂಚನು ದಾಟಿ ಮುಂದೇನು ಎಂದೆಂಬ ಶಂಕೆಯೇ?
ರಕ್ತದಿಂ ಕ್ಷೀರವದು ಪುಟ್ಟದೇ?
ರಕ್ತರಾಜ್ಯದ ಚಂಡಮುಂಡರ
ಶಿರವ ಚೆಂಡಾಡಿದ ರಕ್ತಾಕ್ಷಿಯವಳೆ
ದಲಿತಜನಶಕ್ತಿ ಮುಂದೋಡಿ
ಜನಜಾಗೃತಿಯ ರಾಜ್ಯವನು ಕಟ್ಟಿಹಳು!
ಸಗ್ಗವದು ನೋಡು!
ಸಾಗು! ನಡೆ ಮುಂದೆ ಮುಂದೆ!

೩

ಮೇಲುಕೀಳೆಂಬ ಭೇದ ಭಾವನೆಗಳಿಲ್ಲ,
ಮೂಲಹಕ್ಕಿನ ಭೀತಿ ಭಯಗಳಿಲ್ಲ!
ಧರ್ಮ ಪಂಥ ಜಾತಿ ವೈರಾಗ್ಯಗಳಿಗೆಡೆಯಿಲ್ಲ!

ಕರ್ಮಯೋಗಿಗಳೆ ಕಾಣುವರು ಎಲ್ಲೆಲ್ಲಿಯೂ,
ದಿಕ್ಕಿಲ್ಲದವರಿಲ್ಲ, ಬಿಕ್ಕೆಬೇಡುವರಿಲ್ಲ,
ರೊಕ್ಕವುಳ್ಳವರ ಕೂಟ ಬೇರೊಂದಿಲ್ಲ,
ಬಡತನದ ಕಹಿಯಿಲ್ಲ, ಸಿರಿತನದ ಸೊಕ್ಕಿಲ್ಲ,
ಆರಾಜ್ಯದಲಿ ನೋಡು!
ಸಾಗು! ನಡೆ ಮುಂದೆ ಮುಂದೆ!

೪

ದೇವನಿರ್ಮಿತ ಸುಖಕಷ್ಟಗಳಿವು ನಾನೇನಮಾಡಲಿ
ಎನುತ ಮರುಗುವ ಮನವೆ! ಕೆಚ್ಚೆದೆಯ
ವೀರರ ಕೂಡಿನಡೆ; ನೀನೋಡು!
ನಾವೀನ್ಯಗಳ ನಾಡಂ,
ಸುಖಸಂಪತ್ತುಗಳ ಬೀಡಂ,
ಕತ್ತಲಂ ಭೇದಿಸುತ ನಡೆಮುಂದೆ!
ಕ್ರಾಂತಿಯಾ ಕಡಲಿನಾ ಮಡಿಲಲ್ಲಿ!
ಸಾಗು! ನಡೆ ಮುಂದೆ ಮುಂದೆ!

ಎಲ್ಲಿಹುದು ಚೆಲುನಾಡು

೧

ಎಲ್ಲಹುದು ಚೆಲುನಾಡು ?
ಇಲ್ಲಿಹುದು ಸುಡುಗಾಡು !
        ಉಳುವ ರೈತನನೋಡು,
        ಹಸಿವು ಬೇನೆಯಗೂಡು,
        ಎದೆಯೊಳಗೆ ಉರಿಗಾಡು,
        ಬಾಯೊಳಗೆ ಚೆಲುನಾಡು,
                ಎಲ್ಲಿಹುದು ಚೆಲುಗಾಡು ?
                ಇಲ್ಲಿಹುದು ಸುಡುಗಾಡು !

೨

ಎಲ್ಲಿಹುದು ಚೆಲುನಾಡು ?
ಇಲ್ಲಿಹುದು ಸುಡುಗಾಡು !
        ನೂರು ಭೂತದಕಾಟ,
        ನೂರು ಜಾತಿಯಕೂಟ,
        ಬಲ್ಲಿದರ ಪಿಕಲಾಟ,
        ತಮ್ಮೊಳಗೆ ಜಗಳಾಟ !
                ಎಲ್ಲಿಹುದು ಒಕ್ಕೂಟ ?
                ಇಲ್ಲಿ ಇಲಿಬೆಕ್ಕಿನಾಟ !

೩

ಎಲ್ಲಿಹುದು ಚೆಲುನಾಡು ?
ಇಲ್ಲಿಹುದು ಸುಡುಗಾಡು !
        ದಿನದಿನವು ನರಳಾಟ,
        ಜನಜನದ ಚೀರಾಟ,

ಮನೆಮನೆಯ ಮರುಗಾಟ,
ಜೀವನದ ಹೋರಾಟ,
ಎಲ್ಲಿಹುದು ಚೆಲುನೋಟ?
ಇಲ್ಲಿಹುದು ವಿಧಿಯಾಟ!

೪

ಎಲ್ಲಿಹುದು ಚೆಲುನಾಡು?
ಇಲ್ಲಿಹುದು ಸುಡುಗಾಡು!
ರುದ್ರವೀಣೆಯ ಗಾನ,
ಆತ್ಮಗಳ ಬಲಿದಾನ!
ಕಂಬನಿಯು ಹಿಮಸ್ನಾನ!
ನಾಡೆಲ್ಲ ಬರಿಮಸಣ!
ಎಲ್ಲಿಹುದು ಅನುಮಾನ?
ಇಲ್ಲಿಹುದು ಯಮತಾಣ!

ಓ ಎನ್ನ ಬಾಲೆ

ಧನಿಕನ ನಾರಿ!
ದಲಿತನ ಮಾರಿ!
ಕೊಡುವೆನು ಬಾರ!—ಓ ಎನ್ನ ಬಾಲೆ! ೧

ಬಡವನ ಬಾಳು,
ಹೊಟ್ಟೆಯ ಕಾಳು,
ಕೊಡುವೆನು ಬಾರ!—ಓ ಎನ್ನ ಬಾಲೆ! ೨

ಮುತ್ತಿನ ಸರಪಣಿ,
ಬಡವನ ಕಂಬನಿ,
ಕೊಡುವೆನು ಬಾರ!—ಓ ಎನ್ನ ಬಾಲೆ! ೩

ರತ್ನದ ಸಿರಿಮಣಿ,
ದುಡಿತದ ಬೆವರ್ವನಿ,
ಕೊಡುವೆನು ಬಾರ!—ಓ ಎನ್ನ ಬಾಲೆ! ೪

ವಜ್ರದ ಓಲೆ,
ಚಿನ್ನದ ಮಾಲೆ,
ಕೊಡುವೆನು ಬಾರ!—ಓ ಎನ್ನ ಬಾಲೆ! ೫

ಕತ್ತಿಯ ಹಿಡಿನೀ
ಕತ್ತನು ಕಡಿನೀ
ಕೊಡುವೆನು ಬಾರ!—ಓ ಎನ್ನ ಬಾಲೆ! ೬

ರುಂಡದ ಮಾಲೆ,
ಬೊಂಡಿನ ಓಲೆ,
ಕೊಡುವೆನು ಬಾರ!—ಓ ಎನ್ನ ಬಾಲೆ! ೭

ಎದೆಯನು ಸೀಳು,
ಬಸಿರನು ಕೀಳು,
ಕೊಡುವೆನು ಬಾರ!—ಓ ಎನ್ನ ಬಾಲೆ! ೮

ಹೃದಯದ ಓಲೆ,
ಕರುಳಿನ ಮಾಲೆ,
ಕೊಡುವೆನು ಬಾರ!—ಓ ಎನ್ನ ಬಾಲೆ! ೯

ಬಡವರ ಕೊಂದ,
ನೆತ್ತರಿನಿಂದ,
ಕೊಡುವೆನು ಬಾರ!—ಓ ಎನ್ನ ಬಾಲೆ! ೧೦

ಬಣ್ಣದ ಸೀರೆ,
ಹೊನ್ನಿನ ಹಾರ,
ಕೊಡುವೆನು ಬಾರ!—ಓ ಎನ್ನ ಬಾಲೆ! ೧೧

ಸತ್ಯದ ಸೋಲು,
ಮಿಥ್ಯದ ಗೇಲು,
ಕೊಡುವೆನು ಬಾರ!—ಓ ಎನ್ನ ಬಾಲೆ! ೧೨

ಸ್ಮಶಾನ ಶಾಂತಿ

೧

ಶರದಿಯಾಳದೊಳ
ಗಡಗಿಹೆಯಾದರೆ,
ಧುಮುಕುವೆನು ನುಂಗು ಬಾ!
ಸಲಿಲದಲಿ ಮುಚ್ಚು ಮರೆಸೆನ್ನ ಬಾ,
ಓ ಶಾಂತಿ!

೨

ಕಟುಕನ ಕಠಾರಿಯೊಳ
ಗಡಗಿರುವಿಯಾದರೆ,
ದಯೆಯಿಲ್ಲದೆಯೆ ಕಡಿ ಬಾ!
ಎನ್ನ ಕತ್ತನ್ನು ಕಡಿ ಬಾ!
ಓ ಶಾಂತಿ!

೩

ಡಂ ಡಿಂ ಎನ್ನುವ,
ರಣ ತುಫಾಕಿಯೊಳ
ಗಡಗಿರುವಿಯಾದರೆ–ಸಿಡಿ ಬಾ!
ಎನ್ನ ಶಿರವ ಪುಡಿಗೈ ಬಾ!
ಓ ಶಾಂತಿ!

೪

ಗುಡುಗುವ ಸಿಡಿಲಿನ,
ಒಡಲಿನೊಳಡಗಿರು

ವಿಯಾದರೆ, ಬಡಿ ಬಾ!
ಎನ್ನೆದೆಯನೊಡೆಬಾ!
ಓ ಶಾಂತಿ!

೫

ಭೂಗರ್ಭದೊಳಿಹ,
ಜ್ವಾಲಾಗ್ನಿಯೊಳಡಗಿರು
ವಿಯಾದರೆ—ಚಿಮ್ಮು ಬಾ!
ನಿನ್ನೊರತೆಯಲಿ ತೇಲುವೆನು ಬಾ!
ಓ ಶಾಂತಿ!

೬

ಸಾವು ಕಾಣಿಸುವ,
ಜವನ ಈಟಿಯೊಳ,
ಗಡಗಿರುವಿಯಾದರೆ, ಬಾ!
ಎನ್ನ ಜೀವವನೀಂಟು ಬಾ!
ಓ ಶಾಂತಿ!

ಬೈಗು

ಮುಗಿಲಿನೊಡನೆ ಸರಸವಾಡಿ, ಗಗನದಲ್ಲಿ ನೃತ್ಯವಾಡಿ,
ನಗೆದು ನಲಿದು ಬರುತಲಿಹನು, ಜಗಕೆ ಇಳಿದು ಬರುತಲಿಹನು;
ಖಗಗಳೆಲ್ಲ ಮನೆಯ ಸೇರೆ, ಮಿಗಗಳೆಲ್ಲ ಮರೆಯ ಮೀರೆ,
ಮುಗುದೆ ಬೈಗು ಕರೆಯುತಿರಲು, ನಗುತ ಬಹನು ನೇಸರಲ್ಲಿ,

ಬೈಗು ಬಾಲೆ ಕೈಯ ಚಾಚಿ ಕರೆಯುತಿಹಳು ಹೊನ್ನ ಇಳೆಗೆ,
ಹಗಲ ತಿಂಬ ನಿಶೆಯು ಉಷೆಯ ರತ್ನ ಪ್ರಭೆಯ ಕಂಡು ಬೆದರಿ,
ಪಗಲಿನಾಣ್ಮನೆಡೆದ ಒಡನೆ ದೂರ ಬಾನಿನಂಚಿನೆಡೆಗೆ,
ಮುಗಿಲ ಬೆಟ್ಟ, ಬೆಳ್ಳಿ ಬೆಟ್ಟ, ಬೆಣ್ಣೆ ಬೆಟ್ಟ ದಾಟಿ ಮುಂದೆ

ಬಿಸುಗುದಿರಂ ಕಂಡನಲ್ಲಿ ಭಾನು ಭುವಿಯ ಚುಂಬನಂ!
ತಿರೆಯು ಒಡನೆ ಅರಳಿತಾಗ ಪ್ರೇಮರಸದ ಹೊನಲು ಹರಿದು,
ಶರದಿ ಸಲಿಲ ನಲಿಯಿತಾಗ ಸ್ವರ್ಣವರ್ಣ ಬಿರಿಯಿತಾಗ,
ವಿರಹಿ ಬೈಗಿನರಸಿ ಹೃದಯ ಒಡೆದು ಒಡನೆ ಸುರಿಯಿತಾಗ

ಮುನ್ನೀರದೊ ಕೆನ್ನೀರಾಗೆ ನಾಕವೆಲ್ಲ ನರಕವಾಗೆ,
ಅಹ! ಅಯ್ಯೊ ಕುಸಿಯುತಿಹಳು ಬೈಗು ಬಾಲೆ ರಾಣಿಯವಳು,
ಅಹ! ಸಹಿಸಲಾರೆ ನೋಡಲಾರೆ ಕವಿಯೆ ಬಾರೆಲ,
ಸಹನೆಯಿಂದ ಬೈಗ ಸಾವ ನೋಡಿ ಹಾಡ! ಕವಿಯೆ ಬಾರ!

ಕನಸಕಲಿ

ಬೆವರ ಜಡಿ ಮಳೆಯಿಂತು ಭರದಿಂದ ಬೀಸುತಿರೆ,
ನಿಟ್ಟುಸಿರ ಬಿರುಗಾಳಿ ಸಿಟ್ಟೇರಿ ಬುಸುಗುಟ್ಟಿ,
ಕಂಬನಿಯ ಕಡಲೊಡೆದು ಹಸಿವೆಂಬ ಬಡಬಾಗ್ನಿ
ನೆಗೆದೆದ್ದು ಬಾಯ್ಬಿಟ್ಟು ಭೀಷಣಾಗ್ನಿ ಜ್ವಾಲಾ
ಜಿಹ್ವೆಯಂ ಹೊರ ಚಾಚಿ ನಿಂದು—

"ಬಿಂಕದಿಂ ಗರ್ಜಿಸುವ ಸಿರಿತನದ
ಸಿಂಹಗಳ ಕಂಕುಳಂ ಕತ್ತರಿಸಿ
ಕೆನ್ನೀರ ಕೊಂಡ್ಯೊದು ಚೆಲ್ಲುವೆನು!
ಬಡತನದ ಬಾಳುವೆಯು ಉರಿಯುತಿಹ
ಮಸಣದಲಿ" ಎಂದೆನುತಲಾರ್ಭಟಿಸಿ,
ಧೀಂಕಿಡುತ ಹಾರುತಿರೆ!
ನಭವಲ್ಲೆ ಗುಡುಗುತಿರೆ!
ಭುವಿಯೆಲ್ಲ ನಡುಗುತಿರೆ!
ಸಗ್ಗವದು ಕುಗ್ಗುತಿರೆ—

ಎನ್ನ ತಳ್ಕೈಸುತಾಲಂಗಿಸುತ ಚುಂಬಿಸುವ
ನಿದ್ರಾಂಗನೆಯು ಭೀತಿ ಬಿಟ್ಟೆನ್ನ ತೊಲಗಿರಲು,
ನಡು ಇರುಳ ನಿಶ್ಶಬ್ದ ನೀರವತೆಯೊಳಗಡಗೆ,
ನಾನರಿತೆ ನಾ ಕಂಡ ಕ್ರಾಂತಿ ಕಲಿ 'ಕನಸಕಲಿ' ಎಂದು!

ಸತ್ಯ ಸಮರಕ್ಕೆ ಆಹ್ವಾನ*

ಕನ್ನಡ ನಾಡಿನ ಕುರಿ ಹಿಂಡುಗಳೆ,
ಕನ್ನಡ ನಾಡಿನ ತುರುತಂಡಗಳೆ,
ಬನ್ನಿರಿ ಬನ್ನಿರಿ ನೀವೊಮ್ಮೆ!

ಕನ್ನಡ ನಾಡಿಗೆ ಕಟುಕರು ಬಂದು,
ಕನ್ನಡ ನಾಡನು ಮುತ್ತಿಹರಿಂದು,
ಬನ್ನಿರಿ ಸತ್ಯಾಗ್ರಹವನು ಹೂಡಿರಿ!

ಕಣ್ಣನು ಮುಚ್ಚುತ ಮಲಗಿಹರೆಲ್ಲ,
ಕನ್ನಡ ನಾಡಿನ ಬಲ್ಲವರೆಲ್ಲ
ಬನ್ನಿರಿ ಮಿಗಗಳೆ ನೀವೆಲ್ಲ

ಕನ್ನಡ ನಾಡಿನ ಕಾಗೆಗಳೆ,
ಕನ್ನಡ ನಾಡಿನ ಗೂಗೆಗಳೆ,
ಬನ್ನಿರಿ ಬನ್ನಿರಿ ನೀವೊಮ್ಮೆ!

ಕನ್ನಡ ನಾಡಿನ ಕಂಬನಿ ನೋಡಿ,
ಕನ್ನಡ ನಾಡಿನ ಪಾಡನು ಹಾಡಿ,
ಬನ್ನಿರಿ ಕನ್ನಡ ಕೂಗನು ಕೂಗಿ,

ಕನ್ನಡ ನಾಡಿನ ಕವಿಗಳಿಗೆಲ್ಲ
ಮೌನದ ಮುದ್ರೆಯನೊತ್ತಿಹರಲ್ಲ
ಬನ್ನಿರಿ ಖಗಗಳೆ ನೀವೆಲ್ಲ

---

* ಮಹಾತ್ಮಾಜಿಯವರ ಮುಖಂಡತ್ವದಲ್ಲಿ ನಡೆದ ವೈಯಕ್ತಿಕ ಸತ್ಯಾಗ್ರಹದ ಕಾಲದಲ್ಲಿ, ಬೆಳಗಾವಿನ ಹಿಂಡಲಗಿ ಸೆರೆಮನೆಯೊಳಗೆ ಬರೆದ ಕವನವಿದು.

ನಾಡಿನ ಕಾಡಿನ ಮಿಗಗಳೆ ಖಗಗಳೆ,
ಕನ್ನಡದಮ್ಮನ ಹೆಮ್ಮೆಯ ನಗಗಳೆ,
ಬನ್ನಿರಿ ಓಡುತ ಹಾರುತ ನೀವೊಮ್ಮೆ!

ಕನ್ನಡ ನಾಡಿನ ಕಲಿಗಳು ನೀವೆ,
ಕನ್ನಡ ನಾಡಿನ ಬಲವದು ನೀವೆ,
ಬನ್ನಿರಿ! ನಾಡಿಗೆ ಧೈರ್ಯವ ನೀಡಿರಿ!

ಕನ್ನಡ ನಾಡನು ಕಟ್ಟಿರಿ ಬನ್ನಿ!
ಕನ್ನಡ ಮಂದಿಯ ಬದುಕಿಸಿ ಬನ್ನಿ!
ಬನ್ನಿರಿ! ಬನ್ನಿರಿ! ನೀವೊಮ್ಮೆ!

ಕಾಡಿನಲ್ಲಿ ಬಾಲಧ್ರುವ

೧

ಬಂಡೆಗಳು ಕಗ್ಗಲ್ಲ ಚೆಂಡುಗಳು ಬಿದಿರಿನಾ
ಹಿಂಡುಗಳು ಭೀಮ ಭೂರುಹಗಳ ತಂಡಗಳು
ಕಂಡೊಡನೆ ಕಾಡಿನಲಿ ಲಕ್ಷೋಪಲಕ್ಷದಲಿ
ಗಂಡಾನೆಗಳು ಆನೆಗಳು ಹೆಬ್ಬಾವುಗಳು ಹಾವುಗಳು
ಗುಂಡಾದ ಕಾನನದ ಕೋಣಗಳು ಹಂದಿಗಳು ನಂದಿಗಳು ಭೂ
ಮಂಡಲದ ವೃಗಗಳ ದಂಡುಗಳೆ ಕೂಡಿರ್ದುವಾವನವಲಯದಲಿ

೨

ಗೂಗೆಗಳ ಘೂಂಕಾರ ಕಾಡ್ಕೋಳಿ ಕೇಂಕಾರ
ಬಗೆಬಗೆಯ ಕಾಡಕ್ಕಿಗಳ ಸೊಕ್ಕು ಹೂಂಕಾರ
ಖಗಗಳಾ ಕರ್ಕಶ ಧ್ವನಿ ತುಂಬಿರ್ದುದಾ ವಿಪಿನ ಸಂಪೂರ್ಣ
ಬಾಗಿರುವ ಗೆಲ್ಲುಗಳ ಏರುತ್ತ ಹಾರುತ್ತ
ಹಗೆಗಳಿಗೆ ಹೆದರುತ್ತ ಅದುರುತ್ತ ವಿಕಟ ವಿಕಾರ ಕೂಗ
ಕೂಗುತ್ತ ಕಪಿಕುಲದ ಕೋಲಾಹಲವೆದ್ದಿತ್ತಾವನವಲಯದಲಿ

೩

ದಿಕ್ಕುಗಾಣದ ಬಾಲ ಧ್ರುವನಂದು ಮಲತಾಯ
ಸೊಕ್ಕಿನುರಿಯೊಳು ಬೆಂದು ಬೆಂಡಾದ ಮುದ್ದುಮಗು
ಬಿಕ್ಕೆ ಬೇಡುವರಂತೆ ಕುಳಿತಿರ್ದನಾ ಅರಣ್ಯದ ಮಧ್ಯದಲಿ,
ಬಿಕ್ಕಿ ಅತ್ತಾಗ ಸಂತೈಸಿ ಕಣ್ಣೀರೊರಸುವ
ಅಕ್ಕರೆಯ ಅಮ್ಮನಾ ಸುಳಿವಿಲ್ಲ, ಹಸಿದಾಗ
ಪಕ್ಕನೆ ಹಾಲನ್ನ ನೀಡುವಾ ಕೈ ಇಲ್ಲ, ಹಾ! ದಿಕ್ಕಿಲ್ಲ ಧ್ರುವಗೇ!

೪

ಹೆದ್ದಾರಿ ರಾಜ ಬೀದಿಗಳಿಲ್ಲ, ಮುದ್ದಾದ ಹೂದೋಟಗಳಿಲ್ಲ,
    ಮುದ್ದಾಡಿ ಮುತ್ತಿಡುವ ಜನನಿ ಓ ಕಂದ ಎನುವ
ಸದ್ದಿಲ್ಲ, ಸಿಂಗಾರದಂತಃಪುರವಿಲ್ಲ ಗಾನಮಯ
    ಮಧುರ ಸಂಗೀತ ಜೋಗುಳದ ಸವಿ ಇಲ್ಲ
ವಿಧಿಯ ಚಕ್ರಕೆ ಸಿಲುಕಿ ನೊಂದಿಹ ಹಸುಳೆ!
    ಹೃದಯವು ಪರಿಪೂರ್ಣ ತುಂಬಿಹುದು ಮುರಹರಿಯ ಧ್ಯಾನದಲಿ!

ಧರ್ಮದಾನಿ ಬುದ್ಧದೇವನಿಗೆ—

೧

ಹೇ ದಯಾಮಯ ಮೂರ್ತಿ!
ಭಾರತದ ಧರ್ಮ ಶಾಶ್ವತ ಕೀರ್ತಿ
ಮಾನವನೆ, ಪರಿಪೂರ್ಣ ಪರಿಶುದ್ಧ
ಪವಿತ್ರ ಪಾವನ ನಾದ ಪರಮಾತ್ಮ ನೀನು!

೨

ಜೀವನದ ಸುಖ ಸಂತೋಷಗಳ ಬದಿಗಿಟ್ಟು,
ವಿಶ್ವಶಾಂತಿಗೆ ತನ್ನ ಬಾಳುವೆಯು ಬಲಿಗೊಟ್ಟು,
ನರವಂಶವನೆ ಕಷ್ಟಸಂಕಷ್ಟಗಳಿಂ
ಪಾರುಗೊಳಿಸುವ ದಾರಿತೋರಿಸಿದ ದಾನಿ ನೀನು!

೩

ಅರಸುಕುಲದಲಿ ಹುಟ್ಟಿ,
ದೊರೆತನವ ಸಿರಿತನವ ಮೆಟ್ಟಿ ಹೊರಗಟ್ಟಿ,
ಕತ್ತಲೆಯು ಕವಿದಿರುವ ಪಾಪಿಗಳ ಹೃದಯವುಂ,
ಧರ್ಮದೀಪ್ತಿಯಿಂ ಬೆಳಗಿಸಿದ ರಾಜಸನ್ಯಾಸಿ ನೀನು!

೪

ಧರ್ಮಗಳ ಕರ್ಮಗಳ ಮರ್ಮವನು,
ಪಾಪಗಳ ಪುಣ್ಯಗಳ ಪರಮಾರ್ಥವನು,
ಪರಿಶೀಲಿಸುತ ಮಾನವಗೆ ಬೋಧಿಸಿದ,
ಜಗದ್ಧರ್ಮ ಭಾಸ್ಕರ ಗುರುವರ್ಯ ನೀನು!

೫

ಜಗವೆಲ್ಲ ಧರ್ಮದಾಸ್ಯದಡಿ ಅನುದಿನವು ಬಳಲುತಿರೆ,
ಕರ್ಮಠರ ಕುರುಡುತನ ದಿನದಿನವು ಬೆಳೆಯುತಿರೆ,
ಜನಜಂಗುಳಿಯನುಳಿಸಿ ಸಂರಕ್ಷಿಸಲು,
ನವಧರ್ಮವಂ ಸೃಷ್ಟಿಸಿದ ಪರಬ್ರಹ್ಮನುಂ ನೀನು!

೬


ಭೂಸೃಷ್ಟಿಯುಳಿದಷ್ಟು ಕಾಲ,
ಜಗಜ್ಞಾನ ಭಂಡಾರ ಬರಿದಾಗದಷ್ಟು ಕಾಲ,
ಮಾನವರ ಕುಲ ನಿನ್ನ ಮರೆಯಲುಂಟೆ?
ಹೇ ಕರ್ಮ ಸಂನ್ಯಾಸಿ! ಧರ್ಮಸಿದ್ಧಾಂತ ಸಿದ್ಧಾರ್ಥ, ನೀನು!

೭

ಸತ್ಯ ಪ್ರೇಮ ದಯೆಗಳೆಲ್ಲವನು,
ನಿಃಸ್ವಾರ್ಥ ನೀತಿ ತಾಳ್ಮೆಗಳೆಲ್ಲವನು,
ಬುದ್ಧಿಯಾ ಕಳಶದೊಳಿರಿಸಿ ಪಾಕಂಗೈದು,
ಶುದ್ಧಿಗೊಳಿಸಿದ ಬುದ್ಧ ಶುದ್ಧಾತ್ಮ ನೀನು!

೮

ಸಂಸಾರದುರಿಯ ನಂದಿಸುವ ಗಂಗೆ ನೀನು,
ಸಂತಸದ ಶಾಂತಿ ಸತ್ಯಗಳ ನಿಧಿ ನೀನು,
ಚಿಂತೆ ವ್ಯಸನಗಳಿಗಂತಕನು ನೀನು,
ಆತ್ಮಾನಂದಗೊಳಿಸುವ ಪರಮಾನಂದ ನೀನು



ಮುದ್ದು ಕಂದನಿಗೆ*

ಮೃದುಮಧುರ ಮೂರುತಿಯೆ
ಮುಗುಳು ನಗುವಂ ನಗುತ ಬರುತಿರುವೆ
ಭಾವೀ ಭಾರತದ ಭವಿಷ್ಯವಂ
ನಗುನಗುತ ನೋಡುವಾ ಭಾಗ್ಯ ನಿನಗಿರಲಿ
ಮುಗಿಲು ಕವಿದಿರುವೀ ಹೃದಯಾಕಾಶದಲಿ
ನವ 'ಜೀವನ ಪ್ರಕಾಶ'ವನು ಬೀರುತಿಹ
ಎನ್ನ ಬಾಳ ಭಾಸ್ಕರನೆ! ಜಗದ ಕಲ್ಯಾಣವನು
ನೋಡಿ ದಿನದಿನವು ನಗುವಾನಂದ ನಿನಗಿರಲಿ
ಸೃಷ್ಟಿ ಚೆಲುವನು ಕಂಡು ವಿಶ್ವಶಿಲ್ಪಿಯ ನೆನೆದು
ಜೀವ ಕೋಟಿಗಳೆಲ್ಲ ಬುವಿಯ
ಬೊಕ್ಕಸದೊಳಿಹ ಹೊನ್ನುರತ್ನಗಳೆಂದರಿವ
ಸುವಿಜ್ಞಾನ ಸಂಪತ್ತು ನಿನಗಿರಲಿ!
ವಿಶ್ವವಿಡಿ ಒಟ್ಟಾಗಿ ಮಾನವರ ಕುಲ ಒಂದಾಗಿ
ಶಾಂತಿ ಸತ್ಯಗಳೆ ಸೇನೆಗಳಾಗಿ ಬುವಿಗೆ
ಭದ್ರತೆಯ ನೀಡುವಾ ಸುದಿನವನು ನೋಡುವಾ
ಸೌಭಾಗ್ಯ ಸಂತೋಷ ನಿನಗಿರಲಿ, ಕಂದ!

---

* ಮುದ್ದು ಮಗು 'ಜೀವನ ಪ್ರಕಾಶ'ನಿಗೆ ನಾಲ್ಕನೇ ಜನ್ಮ ದಿನದಂದು ಕೊಟ್ಟ ಆಶೀರ್ವಾದ.

ಅರುಣ ವೀಣೆ

೧

ಉಷೆಯು ಗೀತೆ ಹಾಡುವ,
ಅರುಣ ವೀಣೆ ಮಿಡಿಯುವ,
ಕವನ ರಾಣಿ ಒಲಿಯುವ
ಕವಿಯ ಹೃದಯ ಬಿರಿಯುವ,
ಪ್ರೇಮ ಪ್ರಭೆಗಳಲೆಯುವ,
ಕಾಲ ನಲಿದು ಬೆಳೆಯುವ,
ಸೊಬಗ ಸುಗ್ಗಿ ನೋಡುವ.

೨

ಕೊರಗ ಕೊಳಲನು ಬಾರಿಸಿ,
ಕಾಡ ರಸಿಕರ ಹಾಡಿಸಿ,
ಮುಗ್ಧ ಮೊಗ್ಗೆಯನುಬ್ಬಿಸಿ
ತುರುಗ ಹಿಂಡನು ಎಬ್ಬಿಸಿ,
ಮಂಜು ಕಡಲಡಿ ಆಡಿಸಿ,
ಮುತ್ತು ಹನಿಗಳ ಮುದ್ದಿಸಿ,
ಬೆಟ್ಟ ಗಟ್ಟಿದ ವಂದಿಸಿ,

೩

ಬೆಟ್ಟದ ಬದಿಯಲಿ ಕೆಳಗಿಂದ,
ಇಬ್ಬನಿ ಮುಸುಕಿನ ಒಳಗಿಂದ,
ಹಸುರಿನ ಹೊಲಗಳ ಬಳಿಯಿಂದ,
ಚೆಲು ಇಳಿಯುವ ಚಂದ,
ಹೊಳೆಹೊಳೆಯುವ ಚಂದ,
ಬೆಳೆಬೆಳೆಯುವದೇನಂದ,
ಚಿನ್ನದ ಕಿರಣಗಳಾನಂದ!

೪

ಹಳ್ಳಿಯ ಸುಂದರ ನಲ್ಲೆಯರು,
ಹಸುರಿನ ಹರಿಣಿಗಳಿಲ್ಲಿಹರು,
ಮಾಸಿದ ಸೀರೆಯನುಟ್ಟಿಹರು,
ಹರಿದಿಹ ಕುಪ್ಪಸ ತೊಟ್ಟಿಹರು!
ಚೆಲುವನು ಸೆರೆಯಲಿ ಇಟ್ಟಿಹರು,
ನಿನ್ನೆಯ ಕರಿದಿನ ಮರೆದಿಹರು,
ಹೊನ್ನಿನ ಹೊಸದಿನ ಕರೆಯುವರು!

೫

ಜೊನ್ನಿನ ಹೊಳೆಯೊಳಗಿಳಿದಿಹರು,
ಮಣ್ಣಿನ ಗಡಿಗೆಯ ಹಿಡಿದಿಹರು,
ಚಿನ್ನದ ನೀರನು ಹೊರುತಿಹರು,
ಬೆಂಡೆಯ ಮುಂಡೆಗೆ ಹೊರಿಸುವರು,
ಬದನೆಯ ಎದೆಯಲಿ ಇರಿಸುವರು,
ಮೆಣಸಿನ ಸಾಲಿಗೆ ಸುರಿಸುವರು,
ರತ್ನದ ರಾಶಿಗೆ ಹರಿಸುವರು!

೬

ಮೂಡುಗಡಿಯ ಬಾನಿನಲ್ಲಿ,
ಬಾಲ ರವಿಯು ಆಡುವಲ್ಲಿ,
ಮುರಲಿ ಗಾನ ತಂಗುವಲ್ಲಿ,
ಹೊನ್ನು ಇಳೆಗೆ ಇಳಿಯುವಲ್ಲಿ,
ಹಾಡು ಬಳ್ಳಿ ಬೆಳೆಯುವಲ್ಲಿ,
ಕಾಡು ಮಲೆಯ ನೆತ್ತಿಯಲ್ಲಿ,
ನೋಡು ಗಗನ ಸ್ವರ್ಗವಲ್ಲಿ!

೭

ಚೆನ್ನಿನ ಚೆಲುದಿನ ಇಣುಕುತಿದೆ,
ನನ್ನಿಯ ನವದಿನ ಮಿಣುಕುತಿದೆ,
ಹರುಷದ ನಗುದಿನ ಕರೆಯುತಿದೆ,
ಕಂಬನಿ ಕಹಿದಿನ ಮರೆಯುತಿದೆ,
ಸುಂದರ ಸುಖದಿನ ಬೆಳೆಯುತಿದೆ,
ಹಿಂದಿನ ವಿಷದಿನ ಓಡುತಿದೆ,
ಚಂದದ ಹೊಸ ದಿನ ಮೂಡುತಿದೆ!

ಕೊಡಗು

೧

ಕೊಡಗಿದು ಬೆಡಗಿನ ಚೆಲುನಾಡು!
ಚೆಲುವಿನ ಮಂದಿರ ಮಲೆನಾಡು!!
ಕಿತ್ತಳೆ ಕಾಫಿಯ ತೋಟದ ನೋಟದ ಕೊಡಗಿದು ನೋಡು!
ಏರಿದ ಗಿರಿಮಲೆ ಹಾಡಿನ ಸುರಿಮಳೆ ಸುರಿಸುವ ನಾಡು;
ಕೋಗಿಲೆ ಗಿಳಿಗಳ ಹಾಡಿನ ಹೊಳೆಗಳೆ ಹರಿಯುವ ಕಾಡು;
ಬತ್ತದ ಹೊಲಗಳ ಏಲಗಿ ಮಲೆಗಳ ಕೊಡಗರ ನಾಡು!

೨

ಕವಿಗಳ ಕನಸಿನ ಚೆಲುನಾಡು!
ಚೆಲುವನು ಚೆಲ್ಲುವ ಮಲೆನಾಡು!!
ಕಾಡಿನ ಕಡಲಿನ ಮೋಡದ ತೆರೆಗಳ ಮೋಹನ ನಾಡು;
ಮಂಜಿನ ಹನಿಗಳ ಮುತ್ತಿನ ಮಣಿಗಳ ಮುದ್ದಿನ ನಾಡು;
ವಿಧವಿಧ ಸುಮಗಳ ಘಮಘಮ ಪರಿಮಳ ರಸಋಷಿ ಬೀಡು;
ಸೊಬಗಿನ ಸುಗ್ಗಿಯ ಬೆಡಗಿನ ಸಗ್ಗವು ಕೊಡಗರ ನಾಡು!

೩

ಜನಮನ ನಲಿಯುವ ಚೆಲುನಾಡು!
ಸಿರಿಸೊಗ ಒಲಿದಿಹ ಮಲೆನಾಡು!!
ಪಾವನ ಮೋಹಿನಿ ದಕ್ಷಿಣಗಂಗೆಯು ಜನಿಸಿಹ ನಾಡು;
ಜನ್ಮದ ಕೊಡಗರ ಕನ್ನಡ ಕಲಿಗಳ ಹೆಮ್ಮೆಯ ನಾಡು;
ಬೊಮ್ಮನ ಗಿರಿಯಿಹ ಕೊಡಗರ ಹಿರಿಮೆಯ ಕನ್ನಡ ನಾಡು;
ಹುತ್ತರಿಹಾಡಿನ ನರ್ತನ ರಂಗವು ಕೊಡಗರ ನಾಡು!

ರೈತರ ಹಾಡು

೧

ರೈತರಾಜ್ಯ ಕಟ್ಟುವ
ನಮ್ಮ ವ್ಯಾಜ್ಯ ಮರೆಯುವ,
ಕುಂಞಿ ಕುಂಞಾ ಬನ್ನಿರಿ,
ದೂಜ ದೂಮು ಬನ್ನಿರಿ,
ಪಾತು ಲಚ್ಚು ಬನ್ನಿರಿ,
ಜ್ಯಾಕು ಮರಿಯ ಬನ್ನಿರಿ!

೨

ಹಳೆದಿನವ ಮರೆಯುತ್ತ,
ಊಸದಿನವ ಕರೆಯುತ್ತ,
ಹೊಲಗಳಬಳಿಗೊಮ್ಮೆ ಸಾಗೋಣ!
ಬೆಳೆಗಳು ಬೆಳೆವುದ ನೋಡೋಣ!
ಬಾಳುವೆ ಬೆಳೆಯನ್ನು ಬೆಳೆಸೋಣ!
ನಾಳೆಯ ಸೊಗಸನ್ನು ನೆನಸೋಣ!

೩

ಕೆಸುವಿನ ಎಲೆ ಮೇಲೆ,
ಜಡಿಮಳೆ ಬೀಳೆ,
ತಕಪಕವೆನ್ನುತ ಉರುಳೀತು,
ಎಲೆ ಮತ್ತೆ ಸುಖದಿಂದ ನಲಿದೀತು,
ವ್ಯಸನದ ಮಳೆಬಂದು ಹೋದೀತು,
ಎಲೆಯಂತೆ ಎದೆ ಎಂದು ತಿಳಿದೀತು,

೪

ಸಂಕಮ್ಮ ಎಂಕಮ್ಮ,
ಚೆನ್ನಮ್ಮ ಹೊನ್ನಮ್ಮ,
ಬಡತನ ಕಪಿತನ ಕಡೆತನಕಿಲ್ಲ;
ಹಳ್ಳಿಯ ಹೂಗಳೆ ನೀವೆಲ್ಲ,
ಮಲ್ಲಿಗೆ ಸಂಪಿಗೆ ನಮಗೆಲ್ಲ,
ಘಮಘಮ ಪರಿಮಳ ಬಾಳೆಲ್ಲ!

೫

ಬತ್ತದ ತೆನೆಗಳು,
ತೆಂಗಿನ ಗೊನೆಗಳು,
ಬಾಳಿನ ಹಾಡನ್ನು ಹಾಡ್ಯಾವು;
ಸುಖದಿನ ಬರಲೆಂದು ಬೇಡ್ಯಾವು;
ಮನಸಿಗೆ ಹರಿಸವ ನೀಡ್ಯಾವು;
ಬದುಕನ್ನೆ ಬಂಗಾರ ಮಾಡ್ಯಾವು!

೬

ಹಕ್ಕಿಯಾಗಿ ಹಾರುವ,
ಮೋಘವನ್ನು ಏರುವ,
ಬಾನ ಚೆಲುವು ನೋಡುವ,
ಹೊನ್ನ ದಿನವ ಕರೆಯುವ,
ಚೆನ್ನು ರವಿಯ ಬೇಡುವ,
ಇಳೆಯ ಹೊನ್ನು ಮಾಡುವ,

೭

ತನಿಯಪ್ಪ, ತಿಮ್ಮಪ್ಪ,
ರಾಮಪ್ಪ, ಸೋಮಪ್ಪ,

ರಣಡೋಳು ಬಡಿಯುತ್ತ ಬನ್ನಿ!
‘ಬಡತನ ಭೂತವು ಕುನ್ನಿ!
ಎಲ್ಲಿದೆ ಹುಡುಕೋಣ’ವೆನ್ನಿ!
ಪಿಕ್ಕಾಸು ಹಾರೆಯ ತನ್ನಿ!

೮

ಜನಜನ ಒಂದಾಗಿ,
ಜೇನಿನ ನೊಣವಾಗಿ,
ದಿನವಿಡಿ ದುಡಿಯುವ ಮನಸಿಟ್ಟು,
ನಾಳಿನ ಏಳಿಗೆ ನೆನಪಿಟ್ಟು,
ಸವಿಜೇನು ತುಂಬುವ ನಾಡೊಟ್ಟು,
ಸುಖದಿಂದ ಬಾಳಲಿ ಹೊಸಹುಟ್ಟು!

೯

ಇಂದಿನ ಸರಕಾರ,
ಜನತಾ ಸರಕಾರ,
ಎಂದೆಂಬ ಸಂದೇಹ ಉಂಟೇನು?
ಸರಕಾರ ಕೆಲವರ ಗಂಟೇನು?
ನಾವೆಲ್ಲ ದುಡಿದರೆ ಉಂಟಿನ್ನು,
ನಾವೆಲ್ಲ ಒಲಿದರೆ ಗಂಟಿನ್ನು!

೧೦

ನೇಗಿಲು ನೊಗವಿನ್ನು,
‘ಆಟಂ’ ಬೊಂಬೆನ್ನು!
ನಮ್ಮದೆ ನಾಡೆಲ್ಲ ಅಧಿಕಾರ,
ನಮ್ಮೊಳಗಿರಬೇಕು ಸರಕಾರ,
ಎದುರಿಸಿ ನಮ್ಮಯ ಧಿಕ್ಕಾರ,
ಉಳಿಯದು ಯಾವುದೆ ಸರಕಾರ!

೧೧

ರೈತರ ಸರಕಾರ,
ರೈತರ ಅಧಿಕಾರ,
ಎನ್ನುವ ಹೆಮ್ಮೆಯ ದಿನ ಉಂಟು!
ಬಾಳಿಗೆ ಬೆಳಕೊಮ್ಮೆ ಬರಲುಂಟು!
ಮುಂದಿದೆ ಕಾಯುತ್ತ ಸಿರಿಗಂಟು!
ಮತ್ತಿಲ್ಲ ಬಡತನದೀನಂಟು!

ಪ್ರೇಮವಿಹಾರ

೧

ಬಾ ಬಾರೆ ನನ್ನಾಕೆ ನಡೆಯೋಣ!
ಹಿಂದನ್ನು ಮುಂದನ್ನು ಮರೆಯೋಣ!
ಚಂದವನಿಂದೇ ಸವಿಯೋಣ!
ಬೆಟ್ಟವನೇರುತ್ತ ನಡೆಯೋಣ!
ಬಯಲನ್ನು ನೋಡುತ್ತ ನಲಿಯೋಣ!
ಬಾಳಿಗೆ ಬಣ್ಣವ ಬಳಿಯೋಣ!
ಸಂಜೆಯ ಸಮಯವ ಕಳೆಯೋಣ!

೨

ಮುದ್ದುಮುದದ ಬುಗ್ಗೆನೀನು
ಹರುಷವಾಹಿನಿ!
ತಳಿರುಸುಮದ ಸುಗ್ಗಿನೀನು
ಮುದ್ದುಮೋಹಿನಿ!

೩

ಚೆಲುವಮೋಹ ಮೊಗ್ಗೆನೀನು
ಕಮಲರೂಪಿಣಿ!
ಬುವಿಯಪ್ರೇಮ ಸಗ್ಗನೀನು
ಸುಖವಿಹಾರಿಣಿ!

೪

ಮನದಮನೆಯ ಬದುಕುನೀನು
ಪ್ರೇಮಬಾಷಿಣಿ!
ಮಣಿವೆನಿನ್ನ ಗುಣಕೆನಾನು
ವಿನಯಶಾಲಿನಿ!

೫

ಎದೆಯುಹೃದಯ ಕಾಡಿನಲ್ಲಿ
ಪಿಕವೆ ಆಗಿ ಕುಣಿಯುವೆ!
ಭ್ರಮರಿಯಾಗಿ ಹಾಡಿಯೋಡಿ
ಸುಮದಮೇಲೆ ತಣಿಯುವೆ!

೬

ಹಸುರುಬಳ್ಳಿ ಸಸಿಗಳಾಗಿ
ಸೊಬಗಿನೊಸರು ಬೀರುವೆ!
ಇಂಪುದನಿಯ ಗಿಣಿಯೆ ಆಗಿ
ಅಡಿಹಾಡಿ ಕರೆಯುವೆ!

೭

ಹಾಡಬಳ್ಳಿ ಅಲೆವ ಸುಳಿವ
ಅಳಿಲೆಯಾಗಿ ತೋರುವೆ!
ಕವನಫಲವ ತಿಂದು ಇಂದು
ಸವಿಯನೆಲ್ಲ ಹೀರುವೆ!

೮

ಏರುತಗ್ಗು ಹಾರಿಬರುವ
ಹುಲ್ಲೆಯಂತೆ ಕಾಣುವೆ!
ಕವಿಯ ಎದೆಯೊಳಡಗಿನಿಂದು
ಒಡನೆತಿರುಗಿ ಓಡುವೆ!

೯

ವಿಧಿಯ ಸೃಷ್ಟಿಕಲೆಯು ನೀನು
ಮಧುರ ಮಾಯೆಯು;
ಹೃದಯವನದ ರಾಣಿ ನೀನು!
ಕವಿಯ ವೀಣೆಯು!

೧೦

ನೀನುನಾನು ಉಳಿವತನಕ
ಪ್ರಣಯಲೀಲೆ ನಲಿಯಲಿ!
ಜೀವಜ್ಯೋತಿ ಉರಿವತನಕ
ಬಾಳಬೆಳಕು ಬೆಳಗಲಿ!

೧೧

ಬಾ ಬಾರೆ ನನ್ನಾಕೆ ಸಾಗೋಣ,
ಬೆಟ್ಟದ ನೆತ್ತಿಗೆ ಹೋಗೋಣ,
ಆಕಡೆ ಬಂಡೆಯನೇರೋಣ,
ಈಕಡೆ ಮರದಡಿ ಓಡೋಣ
ಹಸುಗಳ ಚಾಪೆಯೊಳಾಡೋಣ,
ಚುಂಬನ ಸುರಿಮಳೆ ಸುರಿಸೋಣ!
ಲೋಕದ ನಾಕವ ಬೆಳಸೋಣ!

ಚೆಲುವೆ

ಚೆನ್ನಿನ ಚೆಲುವಿನ ಹೆಣ್ಣಿದೊ ನೋಡು!
ಕಣ್ಣಿಗೆ ಹಬ್ಬವ ಮಾಡುವಿ ನೋಡು. ೧

ಮುಂದಲೆ ಮೇಲಿದೆ ಹೂವಿನ ಸೊಂಪು;
ಚಂದದ ತುಟಿಗಳ ಸೊಗಸಿನ ಕೆಂಪು. ೨

ತಾವರೆ ಎಸಳೊಳು ಕರಿಮಣಿ ಇರಿಸಿ;
ಸಾವನು ಮರೆಸುವ ಕಣ್ಣನು ರಚಿಸಿ. ೩

ಮಿಂಚಿನ ಉಳಿಯಲಿ ಮುತ್ತನು ಕೆತ್ತಿ:
ಸಂಪಿಗೆ ಮೊಗ್ಗೆಯ ಚೆಲುವನು ಮೆತ್ತಿ. ೪

ದಂತದ ಪಂಕ್ತಿಯ ಕಟ್ಟಿಹ ಶಿಲ್ಪಿ;
ಇಂಪಿನ ಕವನದ ಕನಸಿನ ಶಿಲ್ಪಿ. ೫

ಕೆಂದಾವರೆ ಕೆಂಬಣ್ಣವ ಕೆರೆಸಿ,
ಕೆಂಗುಲಾಬಿಯೊಳರೆದು ಮುಖಕೊರಸಿ, ೬

ಕಂಗಳಿಗಮಿತಾನಂದವಗೊಳಿಸಿ
ಸುಂದರಿ ಮೆರೆಯುವಳದೊ ಸೊಗದರಸಿ ೭

ಚಿನ್ನದ ವರ್ಣದ ಕುಪ್ಪಸ ನೋಡು,
ಬಣ್ಣದ ಪಟ್ಟೆಯ ಸೀರೆಯ ನೋಡು. ೮

ನೋಡದೊ ಬೆರಗಿನ ಸಿಂಗಾರ;
ನೋಡದೊ ಹೊಳೆಯುವ ಬಂಗಾರ ೯

ಹೆಣ್ಣಿನ ಹೆಗ್ಗುರುತೆದೆಯಲಿ ನೋಡು
ಹೊನ್ನಿನ ಬೆಣ್ಣೆಯ ಮೈಬಣ್ಣ ನೋಡು ೧೦

ನೋಡದೊ ಮೊಗದಲಿ ಕಾಮನ ಕಾಂತಿ!
ನೋಡದೊ ನುಂಗುವ ಪ್ರೇಮದ ಶಾಂತಿ! ೧೧

ಕಾವ್ಯಲೀಲೆ

ಕಾಡು ಹಕ್ಕಿ
  ಹಾಡುತಿರಲು,
    ಗಾನ ಉಕ್ಕಿ
      ಹರಿಯುತಿರಲು;

ಮೂಡು ರವಿಯು
  ಹೊಳೆಯುತಿರಲು,
    ಹಸುರು ಸಸಿಯು
      ಬೆಳೆಯುತಿರಲು;

ನಗುವ ಮಗುವ
  ಮೊಗದೊಳೊಮ್ಮೆ;
    ಅರಳುತಿರುವ
      ಸುಮದೊಳೊಮ್ಮೆ;

ಚೆಲುವು ಚಂದ
  ಸುರಿದ ಮೇಲೆ,
    ಹರುಷದಿಂದ
      ಕಾವ್ಯ ಲೀಲೆ.

ಮನದ ಮನೆಗೆ
  ನಲಿದು ಬಹಳು
    ಎದೆಯು ಇಳೆಗೆ
      ಬೆಳಕು ತಹಳು.

ಕೆಮ್ಮಲೆ*

'ಕೆಮ್ಮಲೆ' ಬೆಟ್ಟವನೇರುವ ನಾವು,
ಬೊಮ್ಮನ ಬೀಡನು ನೋಡುವ ನಾವು!
ಬಾ ತಂಗಿ! ಬಾ ತಮ್ಮ! ೧

ತುರುಗಳ ಮೇವನು ಕಾಣುವ ನಾವು,
ಕರುಗಳ ಕುಣಿತವ ಕಲಿಯುವ ನಾವು,
ಬಾ ತಂಗಿ! ಬಾ ತಮ್ಮ! ೨

ಗಿರಿಗಳ ಸಾಲನು ಕರೆಯುವ ನಾವು,
ನದಿಗಳ ನಾಟ್ಯವ ನಲಿಯುವ ನಾವು,
ಬಾ ತಂಗಿ! ಬಾ ತಮ್ಮ! ೩

ಹಾರುವ ರಸಿಕರ ಬೇಡುವ ನಾವು,
ಮಂದಾನಿಲನೊಡನಾಡುವ ನಾವು,
ಬಾ ತಂಗಿ! ಬಾ ತಮ್ಮ! ೪

ಬಾನಿನ ಬೊಕ್ಕಸ ನೋಡುವ ನಾವು,
ಮುಗಿಲಿಗೆ ಮುತ್ತನು ನೀಡುವ ನಾವು,
ಬಾ ತಂಗಿ! ಬಾ ತಮ್ಮ! ೫

ಸಂಜೆಯ ಸಿರಿಯನು ಕದಿಯುವ ನಾವು,
ನೇಸರ ಕೆಂಪನು ಸೆಳೆಯುವ ನಾವು,
ಬಾ ತಂಗಿ! ಬಾ ತಮ್ಮ! ೬

---

* 'ಕೆಮ್ಮಲೆ' ಎಂಬುದು ವಿಟ್ಲದ ಸಮೀಪ ಒಕ್ಕೆತ್ತೂರು ಎಂಬಲ್ಲಿರುವ ಒಂದು ಬೆಟ್ಟದ ಹೆಸರು.

ಕಾಮನ ಬಿಲ್ಲನು ಕಾಣುವ ನಾವು,
ಕಣ್ಣಿಗೆ ಕಳ್ಳನು ಕುಡಿಸುವ ನಾವು,
ಬಾ ತಂಗಿ! ಬಾ ತಮ್ಮ! ೭

ಸಿಡಿಲಿನ ಮರಿಯನು ಹಿಡಿಯುವ ನಾವು,
ಮಿಂಚಿನ ಮೊಟ್ಟೆಯ ಹುಡುಕುವ ನಾವು,
ಬಾ ತಂಗಿ! ಬಾ ತಮ್ಮ! ೮

ತಾರೆಗೆ ಬಲೆಯನು ಬೀಸುವ ನಾವು,
ಇಂದುವಿಗಿಕ್ಕುವ ಗಾಳವ ನಾವು,
ಬಾ ತಂಗಿ! ಬಾ ತಮ್ಮ! ೯

ಹೂವಿನ ಸೀರೆಯ ನೇಯುವ ನಾವು,
ತಳಿರಿನ ಅಂಗಿಯ ಹೊಲಿಯುವ ನಾವು,
ಬಾ ತಂಗಿ! ಬಾ ತಮ್ಮ! ೧೦

ಕವನದ ಮಾಲೆಯ ಹೆಣೆಯುವ ನಾವು,
ಕಬ್ಬದ ಹಬ್ಬವ ಮಾಡುವ ನಾವು,
ಬಾ ತಂಗಿ! ಬಾ ತಮ್ಮ! ೧೧

ಬೆಳಗಲಿ ಕನ್ನಡ ನಾಡು

ಬೆಳೆಯಲಿ ಬೆಳಗಲಿ ಕನ್ನಡ ನಾಡು ।
ಅಳಿಯದೆ ಉಳಿಯಲಿ ನಮ್ಮಯ ನಾಡು ॥ ಪಲ್ಲ ॥

ಹಸುಗಳ ಹಾಲಿನ, ಜೋಳದ ಕಾಳಿನ ಪಚ್ಚೆಯ ಪೈರಿನ,
ಅನ್ನದ ರನ್ನದ, ಬೊಕ್ಕಸವಿಹ ಸಿರಿನಾಡು ।
ಹಣ್ಣಿನ ಗೊಂಚಲ ಹೊನ್ನಿನ ಹೊಲಗಳ ಮುತ್ತಿನ ತೆನೆಗಳ,
ತೆಂಗಿನ ಕಂಗಿನ ಚೆಲುವಿಹ ಕನ್ನಡ ನಾಡು ॥
ಸಸಿಗಳು ಬೆಳೆಯುವ, ಕುಸುಮಗಳರಳುವ, ಕೋಗಿಲೆ ಗಿಳಿಗಳ,
ಚಂದದ ಗಂಧದ ಹಸುರಿನ ಕಾಡಿಹ ನಾಡು ।
ನಲಿಯುವ ನದಿಗಳ ಗಿರಿಗಳ ಮಲೆಗಳ, ಕಡಲಿನ ತೆರೆಗಳ,
ರಸಋಷಿಗಳ ನೆಲೆವೀಡೀ ನಾಡು ॥ ೧ ॥

ಹೆಸರನು ಪಡೆದಿಹ ಕನ್ನಡ ಕಲಿಗಳ
ಕವಿಗಳ ಕಲೆಗಳ ಹಿರಿ ನಾಡು ।
ಭೋಗವ ತ್ಯಜಿಸಿದ ತ್ಯಾಗಿಗಳುದಿಸಿದ
ನಮ್ಮಯ ಪಾವನ ಕಂನಾಡು ॥
ಬಿಸಿಲಿನ ಗೆಳೆಯನ ನೇಗಿಲ ಯೋಗಿಯ
ಮಮತೆಯ ಮಾತೆಯು ಈ ನಾಡು ।
ಯಂತ್ರವ ನಡಿಸುವ ಮಂತ್ರವನರಿತಿಹ
ಮಜೂರ ಮಂದಿಯ ತಾಯ್ನಾಡು ॥ ೨ ॥

ಬೆಳೆಯಲಿ ಬೆಳಗಲಿ ಕನ್ನಡ ನಾಡು ।
ಅಳಿಯದೆ ಉಳಿಯಲಿ ನಮ್ಮಯ ನಾಡು ॥

ಮಾನವ ಜೀವನ ಸತ್ಯವು ಶಾಂತಿಯು
ದಿನದಿನ ಬೆಳೆಯಲಿ ನಮ್ಮಾ ನಾಡಿನಲಿ ।
ಥಳಥಳ ಹೊಳೆಯಲಿ ಬಾಳ್ವೆಯ ಭಾಸ್ಕರ
ಬೀರಲಿ ಬೆಳಕನು ಕನ್ನಡ ನಾಡಿನಲಿ ॥
ಜನತೆಯ ಹೃದಯದಿ ತಾಳ್ಮೆಯು ಬೆಳೆಯಲಿ
ಪ್ರೇಮವು ನಲಿಯಲಿ ದ್ವೇಷವು ಅಳಿಯಲಿ ।
ಪ್ರೀತಿಯ ನೀತಿಯೆ ನಡತೆಯೆ ನಡೆಯಲಿ
ಹೊನ್ನಿನ ಮಣ್ಣಿನ ನಮ್ಮಯ ನಾಡಿನಲಿ ೩

ಮನೆಮನೆ ಸೌಖ್ಯದ ಸೊಗಸಿನ ಬೆಡಗಿನ
ಸುಂದರ ಸ್ವರ್ಗವೆ ಆಗಲಿ ನಾಡು;
ಸತ್ಯದ ನಾಡೇ ಬೀಡೇ ಆಗಲಿ ॥
ವಿಶ್ವದ ಸಂಸ್ಕೃತಿ ಮನೆಯನು ಮಾಡಲಿ ।
ನಮ್ಮಯ ಚೆನ್ನಿನ ಚೆಲುವಿನ ನಾಡಿನಲಿ ॥
ಮತ್ಸರ ಮರೆಸಲಿ ತಿಳಿವನು ಬೆಳೆಸಲಿ
ಅನುದಿನ ಹರಷದ ಹೊನಲನು ಹರಿಸಲಿ ।
ಕನ್ನಡ ನಾಡದು ಭಾರತ ಭೂಮಿಯಲಿ ೪

ಬೆಳೆಯಲಿ ಬೆಳಗಲಿ ಕನ್ನಡ ನಾಡು ।
ಅಳಿಯದೆ ಉಳಿಯಲಿ ನಮ್ಮಯ ನಾಡು ॥

ಅಳು—ನಗು

೧

ಸಿಹಿಯ ಹಣ್ಣು ಒಳಗಿದೆ,
ಕಹಿಯ ಸಿಪ್ಪೆ ಹೊರಗಿದೆ;
ಕಹಿಯು ಸಿಹಿಯು ಬೆರಸಿದೆ.

೨

ಬಿಳಿಯ ಚಂದ್ರ ಉದಿಸಿದೆ,
ಕರಿದು ಮೋಡ ಮುಸುಕಿದೆ;
ಕರಿದು ಬಿಳಿದು ಬೆರಸಿದೆ.

೩

ಮೇಲೆ ಕಮಲವರಳಿದೆ,
ಕೆಳಗೆ ಕೆಸರು ಅಡಗಿದೆ;
ಹೊಲಸು ಸೊಗಸು ಬೆರಸಿದೆ.

೪

ಅಳುವ ಹಿಂದೆ ನಗುವಿದೆ,
ನಗುವ ಹಿಂದೆ ಅಳುವಿದೆ;
ಅಳುವು ನಗುವು ಬೆರಸಿದೆ.

ಬಾಳ ನಾವೆ

೧

ಬಾಳಿನ ನಾವೆಯು ಬಿಗಿಯುತಲಿಂದು,
ಕನಸಿನ ಗೊಣಸಿನ ಸಂಕಲೆಯೊಂದು,
ಮನಸಿನ ಲೋಕಕೆ ಎಳೆಯುವುದಿಂದು,
"ಕಾಣದ ದಡವದು ಕಾದಿದೆ ಮುಂದೆ,
ಕಂಬನಿ ಕಡಲದು ಉಳಿಯಲಿ ಹಿಂದೆ,
ನಗುವಿನ ಜಗದೆಡೆ ನಡೆಯಲಿ" ಎಂದೆ—

ತುಂತುರು ಹನಿಗಳು ತುಂಬರ ಗಾನವ ಹಾಡುತಿವೆ;
ಅಲೆಗಳು ತಾಳವ ಹೊಡೆಯುತಿವೆ;
ಜಲದಡಿ ಮೀನ್‌ಗಳು ಕುಣಿಯುತಿವೆ;
ಅನಿಲನ ಸ್ವಾಗತ ಕೇಳುತಿದೆ;
ಜೀವನ ಸಾಗರ ನಲಿಯುತಿದೆ;
ಹೃದಯದ ವೀಣೆಯು ಮಿಡಿಯುತಿದೆ;

ಸಾಗದ ಹಾದಿಯು ಸಾಗುತಿದೆ;
ಕಾಣದ ದಡವದು ಕಾಣುತಿದೆ;
ಬಾಳಿನ ನಾವೆಯು ಓಡುತಿದೆ!

೨

ನಾವೆಯನ್ನು ನಡಿಸಲೊಬ್ಬ—
ನೊಡೆಯನಿರಲಿ ಇಲ್ಲದಿರಲಿ—
ಇಳೆಯು ಹೀಗೆ ಉಳಿವುದಿರಲಿ—
ಅಳಿವುದಿರಲಿ—

ಬಾಳ ನಾವೆ ನಡೆಯಲಿ,
ಸಾವು ನೋವು ಮರೆಸಲಿ,
ಅಮರಗಾನ ಹರಿಯಲಿ,
ವಿಶ್ವಶಾಂತಿ ಬಯಸಲಿ,

ನಾಕ ನರಕ ಜನನ ಮರಣವೆಲ್ಲ ಮರೆಸುತ,
ಹರುಷದಿಂದ ಜೀವಗೀತೆ ಹಾಡುತ,
ಬಾಳ ನಾವೆ ಇರಲಿ ಓಡುತ.

ಕಾಣಿಕೆ

೧

ಕಾಡ್ಹೂಗಳ ಕಂಪುಡಿಗೆಯನೆ ತಂದಿಹೆನು,
ಕಾಡ್ಜೇನು ಬುತ್ತಿಯನೆ ಕಿತ್ತು ತಂದಿಹೆನು,
ಕಾಡಕ್ಕಿ ಗಾನ ದಾರದಿ ಕಟ್ಟಿ ತಂದಿಹೆನು,
ಕಾಡ ಕಾಣಿಕೆಯ ಬಿಜ್ಜೆಯರಸಿಗೆ ತಂದಿಹೆನು,
ಸ್ವೀಕರಿಸು ಹರಸು ತಾಯಿ!

೨

ಶೃಂಗಾರದುದ್ಯಾವನದ ಹೂವುಗಳಲ್ಲ
ಸೌಂದರ್ಯವದರಂತೆಯಿದರೊಳಿಲ್ಲ;
ಪೆಟ್ಟಿಗೆಯೊಳಿಟ್ಟು ಬೆಳಿಸಿದ ಜೇನದೇನಲ್ಲ,
ಪರಿಶುದ್ಧಿಗೊಂಡಿರುವ ಮಧುವಿದಲ್ಲ!
ಬೇಡವೆನಬೇಡ ತಾಯಿ!

೩

ಉಳುವ ಗೆಳೆಯನ ಎದೆಯ ಹೊಲದೊಳಗೆ ಬೆಳೆದಿರುವ
ತೆನೆಗಳನು ತಂದಿಹೆನು ನಿನ್ನೆಡೆಗೆ ತಾಯೆ!
ನೆಲದ ಬಾಲೆಯರು ತಮ್ಮಯ ಮನದ ಮನೆಯೊಳಗೆ
ಸಲಹಿರುವ ಗಿಳಿಗಳನು ತಂದಿಹೆನು ನಿನ್ನಡಿಗೆ
ಒಲಿದುಕೊಳ್ಳಮ್ಮ ದೇವಿ!

೪

ನಿಟ್ಟುಸಿರ ಬಟ್ಟಲಲಿ ಕಂಬನಿಯ ಮಲ್ಲಿಗೆಯ
ನಿಟ್ಟುತಂದಿಹೆನು ಕೈ ನೀಡು ತಾಯಿ!
ಹುಟ್ಟು ಬಡವರ ಯುಗಯುಗದ ಬೇನೆಯದೊಂದು
ಬೆಟ್ಟವನೆ ತಂದಿಹೆನು ತಲೆಯೊಡ್ಡು ತಾಯಿ!
ಹೊರೆಯನಿಳಿಸಮ್ಮ ದೇವಿ!

Never before in all the time of man's life on earth : . . . . . Never before was there such stuff for making literature. We are uniquely fortunate, for there is given to us such challenge and such possibility of achievement as was not given to any before our times. Great songs call for great singers, and this is a time for greatness.

Howard Fast.

(Literature and Reality.)

ಹಿಂದೆಂದಾದರೂ ಜಗತ್ತಿನ ಮಾನವ ಜೀವಿತ ಕಾಲದಲ್ಲಿ . . . . . ಹಿಂದೆಂದಾದರೂ ಸಾಹಿತ್ಯ ರಚನೆಗೆ ಇಂತಹ ವಸ್ತು ದೊರೆತುದಿಲ್ಲ. ಅದೊಂದು ವಿಶಿಷ್ಟ ಸುದೈವ ನಮ್ಮದು. ನಮ್ಮ ಕಾಲದ ಹಿಂದಿನ ಯಾರೊಬ್ಬನಿಗಾದರೂ ದೊರೆಯದಂತಹ ಆಹ್ವಾನ ಮತ್ತು ಸಾಧನೆಯ ಸಂಭಾವ್ಯವು ನಮ್ಮ ಮುಂದಿರುತ್ತದೆ ಮಹಾಗೀತೆಗಳು ಮಹಾ ಗಾಯಕರನ್ನು ಕರೆಯುತ್ತಿವೆ ಮಹತ್ವಿಕೆಯ ಕಾಲವಿದು.

ಹವಾರ್ಡ್ ಫಾಸ್ಟ್.

‘ಜೀವನ ಸಂಗೀತ’ — ಬೆಲೆ: ಒಂದು ರೂಪಾಯಿ.

ಪ್ರತಿಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಪುತ್ತೂರು ತಾಲೂಕು ರೈತ ಸೇವಾ ಸಂಘ,

ಕೇಂದ್ರ ಕಚೇರಿ: ವಿಟ್ಲ, ದ. ಕ.

ಕೆನರಾ ಛಾಪಖಾನೆ, ಮಂಗಳೂರು.

ಕೆನರಾ ಛಾಪಖಾನೆ, ಮಂಗಳೂರು.